(SRI S. R. KANTHI)

(e) Government of India have approved the proposals of the Mysore State Adult Education Council which were recommended by the Government of Mysore. The Government have not agreed to fulfil any obligations.

(f) Does not arise.

(g) Does not rise.

KARNATAK UNIVERSITY (AMENDMENT) BILL, 1965.

(Introduction)

SRI S. R. KANTHI (Minister for Education).—I beg to introduce the Karnatak University (Amendment) Bill, 1965.

MR. SPEAKER.—The Karnatak University (Amendment) Bill, 1965, is introduced.

SUPPLEMENTARY AND ADDITIONAL DEMANDS FOR GRANTS FOR THE YEAR 1964-65. (II INSTALMENT)

(Debate continued.)

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡನೆ ಹಣದ ಕಂತು ಎಂದು ಎಷ್ಟು ಕೇಳಿದ್ದಾರೆಂದರೆ, 20,48,32,278 ರೂಪಾಯಿಗಳಷ್ಟನ್ನು ಮಾರ್ಚಿ 31ನೇ ತಾರೀಖಿನ ವರೆಗೆ ಎಂದು, ಈಗಾಗಲೇ ಖರ್ಚಾಗಿರತಕ್ಕವುಗಳಿಗೆಲ್ಲ ಹಣವನ್ನು ಕೊಟ್ಟು ಮತ್ತು ಮುಂದೆ ಬರುವ ಎಲ್ಲ ವ್ಯವಹಾರಗಳನ್ನೂ ಮಾಡುವುದಕ್ಕೋಸ್ಕರ ನಮ್ಮ ಅರ್ಥ ಸಚಿವರು, ಇಷ್ಟು ಹಣವನ್ನು 64-65 ನೇ ಮಾರ್ಚಿ 31 ನೇ ತಾರೀಖಿನವರೆಗೆ ಹಣಕಾಸಿನ ವ್ಯವಹಾರಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಸ್ವಲ್ಪ ಕಷ್ಟನಾಗುತ್ತದೆ ಎಂದು ಈ ಎರಡನೇ ಹಣದ ಕಂತಿನ ಬೇಡಿಕೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ನಮ್ಮ ಆರ್ಥಿಕ ಸಚಿವರು ಎರಡನೇ ಕಂತನ್ನು ಕೇಳುವಾಗ ಅವರಿಗೆ ವಿವೇಚನೆ ಇತ್ತೆ ? ಅವರ ಬಡಾಯಿಯನ್ನು ಎತ್ತಿ ತೋರಿಸಲಿಕ್ಕೆ ಹೀಗೆ ಮಾಡಿದರೆ ? ಇವರಲ್ಲಿ ರಾಜ್ಯದ ಮೇಲೆ ಪ್ರೇಮವಿತ್ತೆ, ರಾಷ್ಟ್ರ ಪ್ರೇಮವಿತ್ತೆ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಇವರು ಬಡ ಬೋರೇಗೌಡನ ಭಂಡಾರವನ್ನು ಖಾಲಿಮಾಡಿ ತಮ್ಮ ಬಡಾಯಿಯನ್ನು ಎತ್ತಿ ತೋರಿಸುವುದಕ್ಕಾಗಿ ಇಲ್ಲಿ ತಂದಿದ್ದಾರೆಂದು ನಾನು ಹೇಳಬೇಕಾಗಿದೆ. ಬಡ ಬೋರೇಗೌಡನ ಭಂಡಾರವನ್ನು ಇವರ ಕೈಗೆ ಕೊಟ್ಟರೆ ಏನಾಗುತ್ತದೆ ಎನ್ನುವುದರ ಬಗ್ಗೆ ಒಂದೆರಡು ವಿಷಯಗಳನ್ನು ಇಲ್ಲಿ ಹೇಳಿದರೆ ಅದರಿಂದ ಎಷ್ಟರಮಟ್ಟಿಗೆ ಹಣಕಾಸಿನ ಸ್ಥಿತಿಗತಿಗಳು ಇವರ ಕೈಯಲ್ಲಿ ಭದ್ರವಾಗಿರುತ್ತದೆ ಎಂಬುದು ವ್ಯಕ್ತವಾಗುತ್ತದೆ. ರಾಜ್ಯದಲ್ಲಿ ಸರ್‌ಚಾರ್ಜನ್ನು ಕಲೆಕ್ಟು ಮಾಡುವುದಕ್ಕಾಗಿ ಪಟೇಲ ಶ್ಯಾನುಭೋಗರುಗಳಿಗೆ ಶೇಕಡಾ 2 ರಷ್ಟು ಮತ್ತು ಮೂರರಷ್ಟು ಎಂದು ಸುಮಾರು 14-5 ಲಕ್ಷದಷ್ಟು ಹಣವನ್ನು ಕೊಟ್ಟಿದ್ದಾರೆ. ಸರಕಾರ ಒಂದೇ ಉಸಿರಿನಲ್ಲಿ ಮಾನ್ಯ ಕಡಿದಾಳ್ ಮಂಜಪ್ಪನವರು ಹೇಳಿದಂತೆ ಪಟೇಲರುಗಳ ಮತ್ತು ಶ್ಯಾನುಭೋಗರುಗಳ ಅನುವಂಶಿಕ ಹಕ್ಕುಗಳನ್ನು ಕಿತ್ತು ಹಾಕಬೇಕೆಂದು ಈ ಸಭೆಯಲ್ಲಿ ಬಿಲ್ಲನ್ನು ತಂದು ಪಾಸು ಮಾಡಿಸಿಕೊಂಡರು. ಅದರ ಮೇಲೆ ಪಟೇಲ ಶ್ಯಾನುಭೋಗರುಗಳು ಹೈಕೋರ್ಟಿಗೆ ಅಪೀಲು ಹೋಗಿದ್ದಾಗಿ ಅಲ್ಲಿಂದ ಸ್ಟೇ ಆರ್ಡರು ಬಂದುದರಿಂದ ಈಗ ಅದು ಸುಪ್ರೀಂ ಕೋರ್ಟಿನವರೆಗೆ ಹೋಗಬೇಕಾಯಿತು. ಪಟೇಲರು ಶ್ಯಾನುಭೋಗರುಗಳಿಗೆ ಸರ್‌ಚಾರ್ಜನ್ನು ಕಲೆಕ್ಟು ಮಾಡಲು ಅವರಿಗೆ ಇಷ್ಟು ಹಣ ಎಂದು

ಕೊಟ್ಟರು ಮತ್ತು ಆದರಂತೆ ಗ್ರಾಮಪಂಚಾಯತಿಗಳ ಸೆಕ್ರೆಟರಿಗಳು ಎಂದು ನೇಮಕ ಮಾಡಿಕೊಂಡು ಅವರಿಗೆ ಬೇರೆ ಸಂಬಳಗಳನ್ನು ಕೊಡುತ್ತಿದ್ದಾರೆ.

ಸ್ವಾಮಿ, ನನ್ನ ತಾಲ್ಲೂಕು ಒಂದರಲ್ಲಿ ಶ್ಯಾನುಭೋಗರ ಸ್ಥಾನದಲ್ಲಿ ನೇಮಕ ಮಾಡಿರುವ ನೌಕರರಿಗೆ ಒಂದು ತಿಂಗಳಿಗೆ ಆರು ಸಾವಿರ ರೂಪಾಯಿ ಕೊಡುತ್ತಾರೆ. ಹೀಗೆ ಒಂದು ವರ್ಷಕ್ಕೆ ಒಂದು ತಾಲ್ಲೂಕಿಗೆ ಒಂದು ಲಕ್ಷ ರೂಪಾಯಿವರೆಗೆ ವೆಚ್ಚ ಮಾಡುತ್ತಾರೆ. ಸರಕಾರಕ್ಕೆ ಬರಬೇಕಾದ ಹಣವನ್ನು ವಸೂಲು ಮಾಡಿ ಖಜಾನೆಗೆ ಕಟ್ಟುವುದಕ್ಕೆ 14 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಪಟೇಲ ಶ್ಯಾನುಭೋಗರ ವಂಶಪಾರಂಪರ್ಯವಾದ ಹಕ್ಕುಗಳನ್ನು ತೆಗೆದುಹಾಕಬೇಕೆಂದು ಮಾಡಿದ ಕಾನೂನು ಎಲ್ಲಿ ಹೋಯಿತು ? ಸುಪ್ರೀಂ ಕೋರ್ಟಿನಲ್ಲಿ ಬೇಗ ತೀರ್ಮಾನ ಆಗುವಂತೆ ಮಾಡುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದೀರಿ ಎಂದು ಸರಕಾರದವರನ್ನು ಕೇಳುತ್ತೇನೆ. ಅತ್ತ ಕಡೆ ಇರುವ ನನ್ನ ಕೆಲವರು ಸ್ನೇಹಿತರು ದೇಶ ಸುಭದ್ರವಾಗಿದೆ, ದೇಶದ ಹಣಕಾಸಿನ ಸ್ಥಿತಿ ಸುಭದ್ರವಾಗಿದೆ ಎಂದು ಹೇಳುತ್ತಾರೆ. ನಾನು ಹೇಳುತ್ತೇನೆ, ಶ್ರೀಮಾನ್ ಜತ್ತಿಯವರ ಕಬ್ಬಿಣದ ಪೆಟ್ಟಿಗೆಗೆ ಬೀಗ ಬೀಗದಕ್ಕೆ ದೊಡ್ಡದಾಗಿದೆ, ಆದರೆ ಪೆಟ್ಟಿಗೆ ತೆಗೆದುನೋಡಿದರೆ ಬರೀ ಖಾಲಿ, ಅದರಲ್ಲಿ ಒಂದು ಕಾಸೂ ಇಲ್ಲ. ರಿಜರ್ವ್ ಹಣವನ್ನೂ ಖರ್ಚು ಮಾಡಿದ್ದಾರೆ. ರಿಜರ್ವ್ ಬ್ಯಾಂಕನ್ನು ಭಿಕ್ಷೆ ಬೇಡುತ್ತಿದ್ದಾರೆ. ಕಂದಾಯ ವಸೂಲ್ಮಾಡಿ ಪೋಲೀಸ್ ಕಾನ್‌ಸ್ಟೇಬಲ್ ಮುಂತಾದ ನೌಕರರ ಸಂಬಳಗಳನ್ನು ಕೊಡಬೇಕಾಗಿದೆ. ನಾನು ವಿನಯಪೂರ್ವಕವಾಗಿ ಒಂದು ಮಾತನ್ನು ಹೇಳುತ್ತೇನೆ. ಮುರಿದ ಮನೆಗೆ ಮೂವತ್ತು ಕಂಬ ಎಂದು ಒಂದು ಗಾದೆ ಇದೆ, ಹಾಗೆ ಮುವತ್ತು ಜನರು ಅಧಿಕಾರ ಪೀಠದಲ್ಲಿ ಕುಳಿತು ಏನು ದೇಶ ಕಲ್ಯಾಣ ಮಾಡುತ್ತಿದ್ದೀರಿ ಎಂದು ಕೇಳುತ್ತೇನೆ. ಸರಚಾರ್ಜು ವಸೂಲು ಮಾಡಿ ಎಂದು ಹೇಳಿ ಇದಕ್ಕೆ 30 ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳುತ್ತಾರೆ, ಇದೊಂದೇ ಸಾಕು ಇವರ ಬುದ್ಧಿವಂತಿಕೆ ಎಷ್ಟೆಂದು ತೋರಿಸುವುದಕ್ಕೆ.

ಇನ್ನು 4ನೆಯ ಬೇಡಿಕೆಯನ್ನು ನೋಡಿದರೆ, 12,900 ರೂಪಾಯಿಗಳನ್ನು ಕಂಟೆಂಜನ್ಸೀಸ್‌ನಲ್ಲಿ ಕೇಳಿದ್ದಾರೆ. ಈ ಹಣ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸುಗಳ ಕಟ್ಟಡಗಳ ಬಾಡಿಗೆಗಾಗಿ ಎಂದು ತಿಳಿಸಿದ್ದಾರೆ. ಗೃಹಸಚಿವರು ಈ ನಡುವೆ ಏನು ಕಲಿತಿದ್ದಾರೆಂದರೆ, ನಾನು ಹೇಳಿದುದೇ ಸರಿ ಎಂಬ ಭಾವನೆಯನ್ನಿಟ್ಟುಕೊಂಡು ಉಡಾಫೆ ಮಾತನಾಡುತ್ತಾರೆ. ಸ್ವಾಮಿ, ಈ ಉಡಾಫೆಯನ್ನು ಅವರು ಬಿಟ್ಟು ರಾಜ್ಯದಲ್ಲಿ ಸರಕಾರವಿರುವುದು ಜನರ ಉದ್ಧಾರಕ್ಕಾಗಿ, ಜನತೆಯ ಆಶೋತ್ತರಗಳನ್ನು ಈಡೇರಿಸುವುದಕ್ಕಾಗಿ, ಜನರ ಪ್ರಗತಿಗೆ ಬೆಂಬಲ ಕೊಡುವುದಕ್ಕಾಗಿ ಎಂದು ತಿಳಿದು ಅದಕ್ಕಾಗಿ ದುಡಿಯಬೇಕೆಂದು ಸಲಹೆ ಮಾಡುತ್ತೇನೆ. ಈ ದಿವಸ ರೋಡ್ ಟ್ರಾನ್ಸ್‌ಪೋರ್ಟ್ ಆಫೀಸನ್ನು ತೆರೆದಮೇಲೂ ಎಷ್ಟೋ ಬಸ್ಸುಗಳು ಮತ್ತು ಲಾರಿಗಳು ಪರ್ಮಿಟ್ ಇಲ್ಲದೆ ಓಡಾಡುತ್ತಿವೆ, ಎಷ್ಟೋ ಖಾಸಗಿ ಕಾರುಗಳು ಪರ್ಮಿಟ್ ಇಲ್ಲದೆ ಟ್ಯಾಕ್ಸಿಗಳಾಗಿ ಓಡಾಡುತ್ತಿವೆ. ಹೀಗಿರುವಾಗ ಅಧಿಕಾರ ತಮಗಿದೆ ಎಂದು ಉಡಾಫೆ ಮಾತನಾಡಬಾರದು. ನಾವು ಹೇಳುತ್ತೇವೆ, ಕಟುವಾಗಿ ಟೀಕೆ ಮಾಡುತ್ತೇವೆ, ಅಧಿಕಾರದಲ್ಲಿರುವವರು ನಮಗೆ ಸಮಾಧಾನಕರವಾದ ಉತ್ತರಗಳನ್ನು ಕೊಡಬೇಕಾದುದು ಅವರ ಕರ್ತವ್ಯ. ಶಿವಮೊಗ್ಗ ಮತ್ತು ಚಿತ್ರದುರ್ಗದಲ್ಲಿ ಎರಡು ರೀಜನಲ್ ಟ್ರಾನ್ಸ್‌ಪೋರ್ಟು ಕಚೇರಿಗಳಲ್ಲಿ ನಡೆಯುವ ವ್ಯವಹಾರಗಳನ್ನು ಅವರು ಕೇಳಿದ್ದಾರೆಯೆ ? ಅಲ್ಲಿ ನಡೆಯುವ ದುರ್ವ್ಯವಹಾರಗಳು ಇನ್ನೆಲ್ಲಿಯೂ ನಡೆಯುತ್ತಿಲ್ಲ. ಬೆಂಗಳೂರು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸಿಗೆ ಹೋಗಿ ನೋಡಲಿ, ಅಲ್ಲಿರುವವರ ಮುಖದ ಮೇಲೆ ಇರುವ ಮೀಸೆಗಳು ಒಂದೊಂದು ಮೊಳ ಇರುತ್ತವೆ, ಅವರು ಓಡಾಡುತ್ತಿರುವ ಕಾರುಗಳು ದೊಡ್ಡ ದೊಡ್ಡ ಫ್ರೆಂಚ್ ಕಾರುಗಳು, ಒಂದೊಂದೂ ಮೂವತ್ತು ನಲವತ್ತು ಸಾವಿರ ರೂಪಾಯಿ ಬೆಲೆಯ ಕಾರುಗಳಲ್ಲಿ ಓಡಾಡುತ್ತಾರೆ, ಅವರ ಸಂಬಳವೇನು ಅವರ ವಹಿವಾಟೇನು ಎಂಬುದನ್ನು ನೋಡಬೇಕು. ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್ ವೈಖರಿಯನ್ನು ನೋಡಲಿ. ಹೀಗಿದರೂ ಕೂಡ ಅರ್ಥ ಸಚಿವರು ಬುದ್ಧಿವಂತಿಕೆಯಿಂದ ಅದು ಚೆನ್ನಾಗಿದೆ, ಇದು ಚೆನ್ನಾಗಿದೆ, ಕಟ್ಟಡದ ತೆರಿಗೆ ಹಾಕುತ್ತೇನೆ, ಇದು ಮಾಡುತ್ತೇನೆ, ಅದು ಮಾಡುತ್ತೇನೆ ಎಂದು ಹೇಳುತ್ತಾರೆ. ಯಾವ ಹಣವೇ ಇರಲಿ, ಅದನ್ನು ಸರಿಯಾಗಿ ಖರ್ಚು ಮಾಡದೇ ಹೋದರೆ, ಪ್ರಜೆಗಳ ಕಲ್ಯಾಣಕ್ಕಾಗಿ ವಿನಿಯೋಗ ಮಾಡದೇ ಹೋದರೆ, ನಿಮ್ಮ ಕೈಯಲ್ಲಿ ರಾಜ್ಯ ಸುರಕ್ಷಿತವಾಗಿರುತ್ತದೆಯೆ ಎಂದು ಕೇಳುತ್ತೇನೆ. ಇದರಲ್ಲಿ ನಡೆಯುತ್ತಿರುವ ದುರ್ವ್ಯವಹಾರಗಳನ್ನು ನಿಲ್ಲಿಸುವುದಕ್ಕೆ ನೀವು ಅಸಮರ್ಥರಾದರೆ ನೀವು ಇದಕ್ಕಾಗಿ ಕೇಳಿರುವ ಹಣವನ್ನು ಕೊಡುವುದು ಯೋಗ್ಯವಲ್ಲವೆಂದು ಅವರಿಗೆ ನಾನು ಹೇಳುತ್ತೇನೆ.

10ನೆಯ ಬೇಡಿಕೆ ಇವರ ಬಡಾಯಿ ವ್ಯವಹಾರಕ್ಕೆ ಇನ್ನೊಂದು ಸಾಕ್ಷಿಯಾಗಿದೆ. ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು. ದೇಶದಲ್ಲಿ ಜನರು ಆಹಾರವಿಲ್ಲದೆ ಹಾತೊರೆಯುತ್ತಿದ್ದಾರೆ, ನಿರು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ದ್ಯೋಗ ತಾಂಡವವಾಡುತ್ತಿದೆ, ಜನ ಬಡತನದಿಂದ ಬಳಲುತ್ತಿದ್ದಾರೆ, ಹೀಗಿದ್ದರೂ ಕೂಡ ಇವರಿಗೆ ದೊಡ್ಡ ದೊಡ್ಡ ಕಾರುಗಳು ಬೇಕು. ಇಲ್ಲಿಗೆ ಬರುವ ಗಣ್ಯ ಅಥಿತಿಗಳಿಗೆ ಬೇಕೆಂದು ಹೇಳುತ್ತಾರೆ. ನಮ್ಮ ರಾಜ್ಯ ಬಡತನದ ರಾಜ್ಯ, ಇಲ್ಲಿ ಶಾಲೆಗಳಿಗೆ ಕಟ್ಟಡಗಳನ್ನು ಕಟ್ಟುವುದಕ್ಕೆ ಹಣವಿಲ್ಲ, ರೋಗಿಗಳಿಗೆ ಅಗತ್ಯವಾದ ಆಸ್ಪತ್ರೆಗಳನ್ನು ತೆರೆಯುವುದಕ್ಕೆ ಇವರಲ್ಲಿ ಹಣವಿಲ್ಲ. ಈ ಬೇಡಿಕೆಯ 1ನೆಯ ಬಾಬಿನಿಂದ 12ನೆಯ ಬಾಬುಗಳನ್ನು ನೋಡಿದರೆ ಈ ಸರಕಾರವನ್ನು ನಡೆಸುತ್ತಿರುವವರ ಬಡಾಯಿಯನ್ನು ತೋರಿಸುತ್ತವೆ. ಮಾತಾಡಿದರೆ ಇಲ್ಲಿಂದ ಡೆಲ್ಲಿಗೆ ರಿಸರ್ವ್ ಸೀಟಿನಲ್ಲಿ ವಿಮಾನದಲ್ಲಿ ಹಾರಡುತ್ತಾರೆ. ಮಂತ್ರಿಗಳು ಡೆಲ್ಲಿಗೆ ಮೆರ್ರಿ ಮೇಕಿಂಗ್, ಎಂದರೆ, ವಿಹಾರಕ್ಕಾಗಿ ಹೋಗುತ್ತಾರೆ. ಮನಸ್ಸು ಬಂದಾಗ ಮೈಮೇಲಿರುವ ಬಟ್ಟೆಯೇ ಸಾಕೆಂದು ಹೊರಡುತ್ತಾರೆ. ಒಂದು ವೇಳೆ ಅಲ್ಲಿಂದ ಹಣ ತರುವುದಕಾಗಿ ಹೋಗುತ್ತೇವೆಂದರೆ, ಇವರು ತಂದ ಹಣವೆಷ್ಟು ? ಇವರ ದಿನಭತ್ಯ ಪ್ರಯಾಣ ಭತ್ಯಕ್ಕೆಷ್ಟು ಖರ್ಚಾಯಿತು ? ಇವರು ಡೆಲ್ಲಿಯಿಂದ ಎಷ್ಟು ಹಣವನ್ನು, ಎಷ್ಟು ಕೋಟಿ ರೂಪಾಯಿಗಳನ್ನು ತಂದರು ? ಸುಂದರರಾದ ಡೆಪ್ಯುಟಿ ಮಿನಿಸ್ಟರು, ಮೈನರ್ ನೀರಾವರಿ ಉಪ ಮಂತ್ರಿಗಳು ಈ ಸಭೆಯಲಿಲ್ಲ; ಬೆಂಗಳೂರಿನಿಂದ ಹೋಗಿ ಬಿಜಾಪುರದಲ್ಲಿ ಭಾಷಣ ಮಾಡಿದರು, ಕೋಟ್ಯಾಂತರ ರೂಪಾಯಿ ತಂದು ನಿಮ್ಮ ಜೇಬಿಗೆ ತುಂಬುತ್ತೇವೆಂದು ಹೇಳಿದರು, ಆದರೆ ಒಂದು ಕಾಸು ಕೂಡ ಮೈಸೂರಿಗೆ ಬರಲಿಲ್ಲ. 17ಕೋಟಿ ರೂಪಾಯಿ, 27 ಕೋಟಿ ರೂಪಾಯಿ ತರುತ್ತೇವೆ ಎಂದು ಹೇಳಿದರು, ಈ ಹಣವೆಲ್ಲವನ್ನೂ ಎಲ್ಲಿ ಬಿಟ್ಟು ಹೋದರು ? ಇವೊತ್ತು ವಿದ್ಯಾಸಚಿವರು ಡೆಲ್ಲಿಗೆ ಹೋಗುತ್ತಿದ್ದಾರೆ. ಏಕೆಂದರೆ, ಇಲ್ಲಿ ತಮಗೆ ಬೇಸರವಾಯಿತೆಂದರೆ, ಡೆಲ್ಲಿಗೆ ಹೋಗುವುದು; ಸುತ್ತಾಡಿಕೊಂಡು ಬರುವುದು ಆದರೆ ಅಲ್ಲಿಂದ ರಾಜ್ಯಕ್ಕೇನು ತಂದಿರಿ ಎಂದು ಕೇಳಿದರೆ, ಏನೂ ಇಲ್ಲ. ಇದು ಬಡಾಯಿ ಅಲ್ಲವೆ ? ಚಿತ್ತಿಯವರಿಗೆ ಆತ್ಮವಿಶ್ವಾಸವಿದ್ದರೆ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ ಎಂದು ಹೇಳಲಿ. ಯಾರಾದರೂ ಆರ್ಥಿಕ ನಿಪುಣರು ಇದನ್ನು ಓದಿನೋಡಿದರೆ ಮೈಸೂರು ಸರಕಾರಕ್ಕೆ ಮಾನ ಮರ್ಯಾದೆ ಇರುತ್ತದೆಯೆ ಎಂಬ ಸಂದೇಹ ಅವರ ಮನಸ್ಸಿನಲ್ಲಿ ಮೂಡುತ್ತದೆ. ಇದರಲ್ಲಿ 2ನೆಯ ಐಟಂನಲ್ಲಿ ಟೆಲಿಫೋನ್ ಟ್ರಂಕ್‌ಕಾಲ್ ಚಾರ್ಜಸ್‌ಗಾಗಿ ಕೇಳಿದ್ದಾರೆ. ಇವರಿಗೆ ಬೀಡಿ ತರುವುದಕ್ಕೆ, ಮೀಸೆ ಬೋಳಿಸುವ ನಾಯಿಂದನನ್ನು ಕರೆಯುವುದಕ್ಕೆ ಇದಕ್ಕೆಲ್ಲ ಇವರು ಟೆಲಿಫೋನ್ ಉಪಯೋಗಿಸಬೇಕು. ಇವರಿಗೆ ಮೀಸೆ ಬೋಳಿಸುವುದಕ್ಕೆ ನಾಯಿಂದ ಬಾಗ್‌ದಾದಿನಿಂದ ಬರಬೇಕು, ಟ್ರಂಕ್‌ಕಾಲ್ ಅವನಿಗೆ ಮಾಡಬೇಕು. ಸಿದ್ದಾಪುರ ಜಮಖಂಡಿಗೆ ಎಲ್ಲಕ್ಕು ಇವರು ಟ್ರಂಕ್ ಕಾಲ್ ಮಾಡಬೇಕು. ಇದಕ್ಕಾಗಿ ಸಾರ್ವಜನಿಕ ಹಣದಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾರೆ. ಇದು ಯಾವ ಪುರುಷಾರ್ಥಕ್ಕಾಗಿ ? ಸಾಹುಕಾರ್ ಚನ್ನಯ್ಯನವರ ಗಲಾಟೆ, ಆವಲರೆಡ್ಡಿಯವರ ಗಲಾಟೆ, ಇದಕ್ಕೆಲ್ಲಾ ನಮ್ಮ ರಕ್ಷಣೆಗೆ ಬನ್ನಿ ಎಂದು ಕರೆಯುವುದಕ್ಕೆ ಟೆಲಿಫೋನ್ ಉಪಯೋಗಿಸಿಕೊಂಡು ನಮ್ಮ ಮೇಲೆ ಯಾವ ಚಾರ್ಜೂ ಇಲ್ಲವೆಂದು ಹೇಳುವುದು. ಇದಕ್ಕೆಲ್ಲ ಲಕ್ಷಾಂತರ ರೂಪಾಯಿ ಟೆಲಿಫೋನ್‌ಗೆ ಖರ್ಚು ಮಾಡಿದರೆ ಪ್ರಜೆಗಳಿಗೆ ಎಷ್ಟು ತೊಂದರೆ ? ದೇಶಕ್ಕೆ ಸಿಕ್ಕುವುದು ಹಿರಿಯೂರು ಬೂದಿಗುಂಬಳಕಾಯಿ. ಮಂತ್ರಿಗಳು ಟೋಪಿ ತೆಗೆದು ಯೋಚನೆ ಮಾಡಲಿ. ದೇಶದ ಹಣಕಾಸಿನ ಸ್ಥಿತಿ ಚೆನ್ನಾಗಿದೆಯೆ ? ನೆನ್ನೆ ತಾನೆ ಶ್ರೀಮಾನ್ ಸೂರ್ಯನಾರಾಯಣರಾಯರು ಹೇಳುತ್ತಿದ್ದಾಗ ಅಧ್ಯಕ್ಷರು ಆಗಾಗ ಹೇಳುತ್ತಿದ್ದರು, ದೇಶದ ಮರ್ಯಾದೆಯನ್ನು ಕೆಡಿಸಬಾರದು, ದೇಶದ ಮುಖಕ್ಕೆ ಮಸಿ ಬಳಿಯಬಾರದು ಎಂದು. ದೇಶದ ಪ್ರಗತಿ ಕುಂಠಿತವಾಗಬೇಕೆಂಬ ಉದ್ದೇಶ ನಮಗಿಲ್ಲ. ನಿಮ್ಮ ಪಕ್ಷದಲ್ಲಿರುವ ಮಹಾ ಬೃಹಸ್ಪತಿಗಳು ನಿಮ್ಮನ್ನು ಕೋಡಾಡಿ ಕೊಂಡಾಡಿ ನಿಮ್ಮ ಕೊಲೆ ಮಾಡುತ್ತಿದ್ದಾರೆಂದು ಮಂತ್ರಿಗಳಿಗೆ ಹೇಳುತ್ತೇನೆ. ಅವರ ಮಾತನ್ನು ಕೇಳಿ, ಅದರಂತೆ ವ್ಯವಹಾರ ಮಾಡಬೇಡಿ, ದೇಶಕ್ಕೆ ಕೆಟ್ಟದ್ದು ಮಾಡಬೇಡಿ ಎಂದು ಹೇಳುತ್ತಿದ್ದೇನೆ. ಒಂದು ಕಾರು ಕೊಂಡುಕೊಳ್ಳಬಾರದೆ, ಒಂದು ಮನೆ ಕಟ್ಟಬಾರದೆ, ಒಂದು ರಿಪೋರ್ಟ್ ಕೊಡಬಾರದೆ ಎಂದು ಕೇಳಬಹುದು. ಆದರೆ ಹಾಗೆ ಮಾಡುವುದಕ್ಕೆ ಮೊದಲು ನಿಮ್ಮಲ್ಲಿ ಎಷ್ಟು ಹಣವಿದೆ ಎಂದು ನೋಡಬಾರದೆ ಎಂದು ನಾನು ಕೇಳುತ್ತೇನೆ. ಫಸ್ಟ್‌ಕ್ಲಾಸ್ ಹೋಟೆಲಿಗೆ ಹೋಗಿ ಹದಿನಾರು ಬಾಟಲ್ ಕುಡಿದು ಎರಡೂ ಕಾಲಾಣೆಯೂ ಜೇಬಿನಲ್ಲಿಲ್ಲದಿದ್ದರೆ ಹೋಟೆಲಿನವನು ನಿಮ್ಮನ್ನು ಸುಮ್ಮನೆ ಬಿಡುತ್ತಾನೆಯೆ ? ತೆಗೆದುಕೊಂಡ ಹಣವನ್ನು ವಾಪಸ್ಸು ಕೊಡದಿದ್ದರೆ ಸುಮ್ಮನೆ ಬಿಡುತ್ತಾರೆಯೆ ? ಸಾಲ ಮಾಡುತ್ತ ಹೀಗೆ ಖರ್ಚು ಮಾಡುವುದನ್ನು ನೋಡಿದರೆ ಕೇಂದ್ರ ಸರಕಾರದವರು ಮತ್ತು ಈ ದೇಶದ ಜನರು ಸುಮ್ಮನಿರುತ್ತಾರೆಯೆ ? ನಮ್ಮ ಜೇಬಿನಲ್ಲಿ ಎಂಟಾಣೆ ಇದ್ದರೆ ಆರಾಣೆ ಖರ್ಚು ಮಾಡಬಹುದು. ಈಗ ಶಾಸ್ತ್ರೀಯವಾಗಿ ಖರ್ಚು ಮಾಡುತ್ತಿದ್ದಾರೆಯೆ ? ಇಲ್ಲ. ಆದುದರಿಂದ ನಿಮ್ಮ ಕೈಯಲ್ಲಿ ದೇಶದ ಹಣ, ದೇಶದ ಆಗುಹೋಗುಗಳು ಚೆನ್ನಾಗಿಲ್ಲ, ಸುರಕ್ಷಿತವಾಗಿಲ್ಲ ಎಂದು ಅವರಿಗೆ ನಾನು ಹೇಳುತ್ತೇನೆ.

10-00 A.M.

ಸ್ವಾಮಿ, ಇವರನ್ನು ಏನಾದರೂ ಕೇಳಿದರೆ ಕೃಷ್ಣಾ ನೀರು, ಗೋದಾವರಿ ನೀರು, ಕಾವೇರಿ ನೀರು ಅನ್ನುತ್ತಾರೆ. ಮಾತೆತ್ತಿದರೆ ಶರಾವತಿ ಯೋಜನೆ ಹೇಳುತ್ತಾರೆ. ಶರಾವತಿ ಯೋಜನೆಯ ಹೆಸರು ಹೇಳಿ ಮೇಲಿಂದ ಮೇಲೆ ಏರೋಪ್ಲೇನ್ ಹತ್ತುತ್ತಾರೆ. ರಾವ್ ಅವರು ಹಾಗೆ ಹೇಳಿದರು, ಇವರು ಹೀಗೆ ಹೇಳಿದರು ಎಂದು ಬಿಡುತ್ತಾರೆ. ಏರೋಪ್ಲೇನ್ ಹತ್ತಿ ದಿಲ್ಲಿಗೆ ಏತಕ್ಕೆ ಹೋಗುತ್ತಾರೆ? ದಿಲ್ಲಿಗೆ ಹೋಗುವುದನ್ನು ಸ್ವಲ್ಪ ಕಡಿಮೆ ಮಾಡಿ ಎಂದು ನಾನು ಅವರಿಗೆ ಹೇಳುತ್ತೇನೆ. ಯಾಕೆಂದರೆ ದಿಲ್ಲಿ ಸರಕಾರದಲ್ಲಿ ಇವರ ಮಾತು ಅಷ್ಟು ಇಫೆಕ್ಟಿವ್ ಆಗಿಲ್ಲ. ಇವರ ಮಾತು ಇನ್—ಎಫೆಕ್ಟಿವ್ ಆಗಿದೆ. ದಿಲ್ಲಿಯಲ್ಲಿ ತಿಂಗಳಿಗೆ 3,000 ರೂಪಾಯಿ ಸಂಬಳ ಕೊಟ್ಟು ಒಬ್ಬ ಅಧಿಕಾರಿಯನ್ನು ಏತಕ್ಕೆ ಇಟ್ಟಿರುವಿರಿ? ಈ ಅಧಿಕಾರಿ ಒಂದು ಬಿಳಿ ಆನೆಯಾಗಿದೆ. ಅವನನ್ನು ಏತಕ್ಕೆ ಇಟ್ಟಿದ್ದೀರಿ? ಈ ಅಧಿಕಾರಿಗೆ ಸಂಬಳ, ಮನೆ ಸಿಬ್ಬಂದಿ, ಟೇಬಲ್, ಫರ್ನೀಚರು, ಟೆಲಿಫೋನು ಮುಂತಾದ ಸೌಕರ್ಯಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತೀರಿ. ಇದು ಏತಕ್ಕೆ? ಈ ಪೋಸ್ಟ್ ಅಬಾಲಿಷ್ ಮಾಡಿಬಿಡಿ ಎಂದು ಹೇಳುತ್ತೇನೆ. ಮನೆ, ಆಫೀಸು, ಫರ್ನೀಚರ್, ಟೆಲಿಫೋನು ಏತಕ್ಕೆ ಬೇಕು? ಇವರು ನಿಮ್ಮ ಮಾತು ಕೇಳುವುದಿಲ್ಲ. ಇಲ್ಲಿ ಇರತಕ್ಕಂಥ ಐ.ಎ.ಎಸ್. ಹಾಗೂ ಐ.ಪಿ.ಎಸ್. ಅಧಿಕಾರಿಗಳು ನಿಮ್ಮ ಮಾತು ಕೇಳುವುದಿಲ್ಲ ಅಂದ ಮೇಲೆ ಅಷ್ಟು ದೂರ ಇರುವ ಅಧಿಕಾರಿ ನಿಮ್ಮ ಮಾತು ಹೇಗೆ ಕೇಳುತ್ತಾನೆ? ಅವರು ಯಾವುದೋ ಹೋಟಲಿನಲ್ಲಿದ್ದು ಮಜಾ ಮಾಡಿಕೊಂಡು ಇರುತ್ತಾರೆ. ಅಂಥ ಅಧಿಕಾರಿಯನ್ನು ಇಟ್ಟುಕೊಂಡು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ನೀವು ದಿಲ್ಲಿಗೆ ಏತಕ್ಕೆ ಹೋಗುತ್ತೀರಿ? ಹಣ ಕಾಸಿನ ಸಚಿವರಾದ ಜತ್ತಿಯವರೇ, ನಿಮ್ಮ ಬಗ್ಗೆ ವೈಯಕ್ತಿಕ ದ್ವೇಷದಿಂದ ನಾನು ಮಾತನಾಡುವುದಿಲ್ಲ. ತಾವು ಅಧಿಕಾರದ ಸ್ಥಾನದಲ್ಲಿ ಇದ್ದೀರಿ. ಆದರೆ ಹೊಟ್ಟೆಕಿಚ್ಚಿಗೆ ಮಾತನಾಡುತ್ತಿಲ್ಲ. ಇಂದು ಜತ್ತಿಯವರು ಇದ್ದಾರೆ, ನಾಳೆ ಅವರು ಆ ಸ್ಥಾನದಲ್ಲಿ ಇಲ್ಲದೇ ಇರಬಹುದು. ಆದುದರಿಂದ ಅಧಿಕಾರ ಸೂತ್ರ ಕೈಯಲ್ಲಿ ಇರುವವರೆಗೆ ಅದನ್ನು ಬಿಗಿಯಾಗಿ ಹಿಡಿದಿರಬೇಕು. ದೇಶದ ಕಲ್ಯಾಣ ಜನತೆಯ ಹಿತದೃಷ್ಟಿ ನಿಮ್ಮ ಮನಸ್ಸಿನಲ್ಲಿ ಇರಬೇಕು ಎಂದು ಇಷ್ಟು ಮಾತ್ರ ಹೇಳುತ್ತೇನೆ.

ನಾನು ಹೇಳುವುದು ಇಷ್ಟೇ. ಈ ಪೋಸ್ಟ್ ಇರುವುದರಿಂದ ಮೂರು ಕಾಸು ಲಾಭ ಬಂದಿಲ್ಲ. ಅವರು ಯಾವ ಆಫೀಸಿಗೂ ಹೋಗಿ ಕೆಲಸ ಮಾಡುವುದಿಲ್ಲ. ಮಂತ್ರಿಗಳು ದಿಲ್ಲಿಗೆ ಬಂದಾಗ್ಗೆ ಕಾಂಗ್ರೆಸ್ ಆಫೀಸಿಗೆ ಹೋಗಿ ನಿಮಗೆ ಸಲಾಮು ಹೊಡೆದು ಸುಖವಾಗಿ ಊಟ ಮಾಡಿಕೊಂಡು ಇದ್ದಾರೆ. ಆದಕಾರಣ ಇಂಥ ಲೇಸಾನ್ ಆಫೀಸರ್ ಇರುವುದು ಬೇಡ. ಅವರಿಗೆ ಸಂಬಳ ಕೊಡುವುದು ಬೇಡ, ಇದನ್ನು ತೆಗೆದು ಹಾಕಿಬಿಡಿ ಎಂದು ನಾನು ಹೇಳುತ್ತೇನೆ. ಕಾರು ಕೊಟ್ಟಿರುವುದು, ಟೀ. ಎ., ಡೀ. ಎ. ಡಬ್ಬು ಮಾಡುವುದು ಇಂಥಾದ್ದು ನೀತಿವಂತರು ಮಾಡತಕ್ಕದ್ದಲ್ಲ. ಇದನ್ನು ಸ್ವಲ್ಪ ಯೋಚನೆ ಮಾಡಬೇಕು ಸ್ವಾಮಿ. ಡಿಮ್ಯಾಂಡ್ ನಂಬರ್ 11 ನೋಡಿದರೆ ನನಗೆ ಅನಿಸುತ್ತದೆ: ನಮ್ಮ ನ್ಯಾಯಾಂಗ ಸಚಿವರು ಎಷ್ಟು ಬುದ್ಧಿವಂತರು ಇದ್ದಾರೆ, ಅವರು ಲೀಗಲ್ ಅಡ್ವೈಸ್ ಕೊಡುತ್ತಾರೆ. ಈ ರೀತಿ ಇದ್ದರೂ ಕೂಡ ಬೇರೆಯವರು ಬಂದು ಬುದ್ಧಿವಾದ ಏಕೆ ಕೊಡಬೇಕಾಯಿತು? ಈ ಲೀಗಲ್ ಅಡ್ವೈಜಕ್ಕಾಗಿ, 3,60,000 ರೂಪಾಯಿ ಖರ್ಚು ಮಾಡಿದ್ದೀರಿ. ಇಷ್ಟು ಹಣ ಖರ್ಚು ಮಾಡಬೇಕಾದರೆ ಲೀಗಲ್ ಅಡ್ವೈಜ್ ಕೊಡುವುದಕ್ಕೆ ಯಾರು ಯಾರು ಬಂದಿದ್ದರು? ನಮ್ಮ ಲಾ ಡಿಪಾರ್ಟಮೆಂಟ್ ಮುಳುಗಿ ಹೋಯಿತೇನು? ಇಷ್ಟು ಹಣ ಏತಕ್ಕೋಸ್ಕರ ಖರ್ಚು ಮಾಡಿದ್ದೀರಿ? ಇದು ಬುದ್ಧಿವಂತಿಕೆಯ ಲಕ್ಷಣವಲ್ಲ. ಇದರಿಂದ ದೇಶದ ಹಿತ ಸಾಧನೆಯಾಗುತ್ತದೆಯೇ? ಇಷ್ಟು ಹಣ ಲೀಗಲ್ ಫೀಜ್ ಎಂದು ಖರ್ಚು ಮಾಡುವುದಾದರೆ ತಾವು ಆ ಸ್ಥಾನದಲ್ಲಿರುವುದಕ್ಕೆ ಲಾಯಖ್ ಅಲ್ಲ ಎಂದು ಒಂದು ಮಾತನ್ನು ಹೇಳುತ್ತೇನೆ.

ಇನ್ನು ಗೃಹ ಸಚಿವರ ಹೋಂ ಡಿಪಾರ್ಟ್‌ಮೆಂಟಿನ ಬಗ್ಗೆ ಹೇಳುತ್ತೇನೆ. ಇಂಟಲಿಜೆನ್ಸ್ ಬ್ರಾಂಚ್, ಸ್ಪೆಷಲ್ ಬ್ರಾಂಚ್, ಕ್ರಿಮಿನಲ್ ಬ್ರಾಂಚ್ ಇವುಗಳನ್ನು ಏತಕ್ಕೆ ಇಟ್ಟುಕೊಂಡಿದ್ದಾರೆ? ಈ ಇಲಾಖೆಗಳ ಮೇಲೆ ಇವರು ಅಧಿಕಾರ ಮಾಡುತ್ತಾರೆಯೇ? ಈ ಇಲಾಖೆಗಳ ಕಾರ್ಯ ಏನು? ಇದು ನಿಜವಾಗಿಯೂ ಉಚಿತವಲ್ಲ. ಈ ಇಲಾಖೆಗಳ ಆಡಳಿತಕ್ಕೆ ಎಷ್ಟು ಹಣ ಸರ್ಕಾರ ಖರ್ಚು ಮಾಡುತ್ತದೆ? ಇದನ್ನು ಸರ್ಕಾರ ಯೋಚನೆ ಮಾಡಬೇಕು.

ದೇಶದಲ್ಲಿ ಇಂದು ಕೈಗಾರಿಕೆ ಅಭಿವೃದ್ಧಿಯಾಗಿದೆ ಎಂದು ಹೇಳುತ್ತಾರೆ. ಡಿಮ್ಯಾಂಡ್ ನಂಬರ್ 20 ರಲ್ಲಿ ಎರಡು ಲಕ್ಷ ಎಂಭತ್ತೈದು ಸಾವಿರ ಚಿಲ್ಲರೆ ವ್ಯವಸಾಯ ಇಲಾಖೆಯ ಸುಧಾರಣೆಗಾಗಿ ಬೇಡಿಕೆ ಇದೆ. ಸರ್ಕಾರಕ್ಕೆ ನಾನು ಬಹು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವ್ಯವಸಾಯ ಇಲಾಖೆಯನ್ನು ಮುಚ್ಚಿಬಿಡಿ. ಈ ಇಲಾಖೆಯಲ್ಲಿ ಸರಿಯಾಗಿ ಕೆಲಸ ಕಾರ್ಯಗಳು ನಡೆಯು...

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ತ್ತಿಲ್ಲ. ಸರ್ಕಾರದ ಬೊಕ್ಕಸದಿಂದ ಹಣ ವ್ಯರ್ಥವಾಗಿ ಖರ್ಚಾಗುತ್ತಿದೆ. ಜನರಿಗೆ ಅದರ ಪ್ರಯೋಜನವಾಗುತ್ತಿಲ್ಲ. ಸಿಬ್ಬಂದಿಗೆ ಕೊಡುವ ಸಂಬಳಕ್ಕಾಗಿ ಸಾವಿರಾರು ರೂಪಾಯಿ ಖರ್ಚಾಗುತ್ತಿದೆ. ಆದರೂ ಕೂಡ ಯಾವದೇ ಯೋಜನೆಯಿಂದ ಹೆಚ್ಚು ಬೆಳೆ ಬೆಳೆಯುತ್ತಿಲ್ಲ. ಆಹಾರ ಧಾನ್ಯದ ಕೊರತೆ ಇಂದು ದೇಶದಲ್ಲಿ ಹೆಚ್ಚಾಗಿದೆ. ಮೂರನೇ ಯೋಜನೆ ಮುಗಿಯುತ್ತ ಬಂದರೂ ಕೂಡ ಜನರಿಗೆ ಅನ್ನ ಸಿಕ್ಕುತ್ತಿಲ್ಲ. ಈ ಇಲಾಖೆಯಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳನ್ನು ಇಟ್ಟುಕೊಂಡು ಏನು ಪ್ರಯೋಜನ? ಇಂಥ ಪರಿಸ್ಥಿತಿ ದೇಶದಲ್ಲಿ ಇರುವುದು ನಿಜವಾಗಿಯೂ ಶೋಚನೀಯ.

ಇನ್ನು ಹೈದರಾಬಾದ್-ಕರ್ಣಾಟಕ ಪ್ರದೇಶದಲ್ಲಿ ಕಂದಾಯ ಬಾಕಿ ವಸೂಲಿ ಎಂಟು ಲಕ್ಷ ರೂಪಾಯಿ ರೈಟ್ ಆಫ್ ಮಾಡಿದ್ದೀರಿ. ಹಳೇ ಮೈಸೂರಿನಲ್ಲಿ ಒಂದು ರೂಪಾಯಿ ಕಂದಾಯ ಕಡಿಮೆ ಮಾಡಿಲ್ಲ. ಇದು ಯಾವ ನ್ಯಾಯ? ಇದನ್ನು ಸರ್ಕಾರ ಯೋಚನೆ ಮಾಡಬೇಕು.

ಹಣಕಾಸಿನ ಸಚಿವರು ಹಣವಿಲ್ಲ ಎಂದು ಹೇಳುತ್ತಾರೆ. ಆದರೆ ಬೆಂಗಳೂರು ಮತ್ತು ಮಂಗಳೂರು ನಡುವಿನ ಏರ್‌ಲೈನ್ ಸರ್ವಿಸಿಗೆ ಲಕ್ಷಾಂತರ ರೂಪಾಯಿ ಕೊಡುತ್ತೀರಿ. ನಮ್ಮದು ಬಡವರ ದೇಶ. ಏರೋಪ್ಲೇನ್ ಸರ್ವಿಸಿಗೆ ಏತಕ್ಕೆ ಇಷ್ಟು ಹಣ ಕೊಡಬೇಕು? ಈ ಹಣ ಕೊಡಲು ನಮ್ಮ ರಾಜ್ಯದ ಬೊಕ್ಕಸದಲ್ಲಿ ಹಣ ಇದೆಯೋ ಎಂದು ಹಣಕಾಸಿನ ಸಚಿವರನ್ನು ಕೇಳುತ್ತೇನೆ. ರಾಜ್ಯಭಾರ ಸರಿಯಾಗಿ ಮಾಡುವುದಕ್ಕಾಗದಿದ್ದರೆ ರಾಜೀನಾಮೆ ಕೊಟ್ಟು ಹೋಗಿಬಿಡಿ ಎಂದು ಹೇಳುತ್ತೇನೆ.

ರಾಜ್ಯದ ಹಣಕಾಸಿನ ವ್ಯವಸ್ಥೆಗೆ ಕಂಟಿನ್‌ಜೆನ್ಸಿ ಫಂಡ್ ಇದೆ. ಒಂದು ಆರ್ಡಿನೆನ್ಸ್ ಮೂಲಕ ಈ ಕಂಟಿನ್‌ಜೆನ್ಸಿ ಫಂಡನ್ನು 3 ಕೋಟಿ ರೂಪಾಯಿಗೆ ಹೆಚ್ಚು ಮಾಡಿದ್ದೀರಿ. ಹಿಂದಕ್ಕೆ ಒಂದು ಕೋಟಿ ಇದ್ದುದನ್ನು ಎರಡು ಕೋಟಿ ಮಾಡಲಾಗಿತ್ತು. ಈಗ ಇದನ್ನು ಮೂರು ಕೋಟಿಗೆ ಪರಿಶಿಸಲಾಗಿದೆ. ಸರ್ಕಾರ ಹೀಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವುದು ಸರಿಯೇ? ಎಂದು ಕೇಳುತ್ತೇನೆ.

What has happened to that fund? Why did you draw that money? What was the necessity to draw that money? Under what circumstances was it withdrawn? Why did you spend that money? Why did you want an increase? Why did you not move the matter before this House. Is it not a crime that you have committed? Is it not a sin that you have committed? Really, you are traitors to this country. You are a burden to the State.

MR. DEPUTY SPEAKER.—'Traitor' is not a proper word to be used.

SRI C. J. MUCKANNAPPA.—I just withdraw the word 'traitor' keeping in view the Hon'ble Speaker's direction.

(*Interruption.*)

SRI C. J. MUCKANNAPPA.—Sir, I want to tell my friend—if there is anything, you are there to pull him up.

SRI M. C. BASAPPA (Chamarajnagar).—He has misunderstood the word contingency fund.........

SRI C. J. MUCKANNAPPA.—Because, I am not a lawyer? He is a Sunday lawyer. Why won't he go to the Court?

I tell the Ministers. You are a burden on the exchequer. Is it not extravagance when you are observing the austerity measures? I request the Government through you, Sir. ಹೀಗೆ ಒಟ್ಟಿನಲ್ಲಿ ಅರ್ಥ ಸಚಿವರಿಂದ ದೇಶಕ್ಕೆ ದೊಡ್ಡ ಅನಾಹುತವಾಗಿದೆ; ಇನ್ನಾದರೂ ಇವರು ತಮ್ಮ ದರ್ಬಾರನ್ನು ನಿಲ್ಲಿಸಿಬಿಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಮಾನ್ಯ ಸಭಾಪತಿಯವರೇ, ಈಗ ನಮ್ಮ ಮುಂದೆ ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕ ಅನುಪೂರಕ ಅನುದಾನಗಳ ಬೇಡಿಕೆಗಳಿಗೆ ಸಂಬಂಧಪಟ್ಟ ಮಸೂದೆಯನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ನಾನು ಅಧ್ಯಕ್ಷರ ಮೂಲಕ ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಇಲ್ಲಿ ಕೊಟ್ಟಿರತಕ್ಕ ಎರಡನೆಯ ಡಿಮ್ಯಾಂಡಿನಲ್ಲಿ—ಪಟೇಲ, ಶ್ಯಾನುಭೋಗರುಗಳಿಗೆ ಲ್ಯಾಂಡ್ ರೆವಿನ್ಯೂ ಸರ್‌ಛಾರ್ಜನ್ನು ವಸೂಲ್ಮಾಡಿದ ಬಗ್ಗೆ ಕೊಡಬೇಕಾಗಿರತಕ್ಕ ಸಂಭಾವನೆಗಾಗಿ ಇಲ್ಲಿ 14 ಲಕ್ಷ 44 ಸಾವಿರ ಚಿಲ್ಲರೆ ರೂಪಾಯಿಗಳನ್ನು ಕೇಳಿದ್ದಾರೆ. ಇದು ಹೇಗಿದೆಯೆಂದರೆ— ಮೊನ್ನೆ ತಾನೆ ನಾನ್‌ಗೆಜೆಟೆಡ್ ಅಧಿಕಾರಿಗಳಿಗೆ ತುಟ್ಟಿಭತ್ಯ ಕೊಡತಕ್ಕ ವಿಚಾರದಲ್ಲಿ ಯಾವ ರೀತಿ ವರ್ತಿಸಿದ್ದಾರೋ ಅದೇ ರೀತಿ ಇಲ್ಲಿಯೂ ವರ್ತಿಸಿದ್ದಾರೆ. ಇದನ್ನು ನೋಡಿದರೆ ಸರ್ಕಾರಕ್ಕೆ ಪಟೇಲ, ಶ್ಯಾನುಭೋಗರ ಬಗ್ಗೆ ಎಷ್ಟು ನಿರ್ಲಕ್ಷ್ಯ ಮನೋಭಾವ ಮತ್ತು ಹಣದ ನಿಕೃಷ್ಟತೆ ಎದ್ದು ಕಾಣುತ್ತಿದೆ. ಇದು ಸರ್ಕಾರಕ್ಕೆ ಖಂಡಿತ ಸರಿಯಲ್ಲ. ಆದರೆ ಈಗಾಗಲೇ ಮಾತನಾಡಿದಂಥ ಶ್ರೀಮಾನ್ ಜಿ. ವಿ. ಗೌಡರೂ ಮತ್ತು ಮುಕ್ಕಣ್ಣಪ್ಪನವರೂ ಇದು ಅವರ ಮೇಲಿರತಕ್ಕ ಒಂದು ಅಬ್ಲಿಗೇಟರಿ ಡ್ಯೂಟಿ ಎಂಬುದಾಗಿ ಹೇಳಿದ್ದಾರೆ. ಆದರೆ ಇವರ ವಿಚಾರದಲ್ಲಿ ಸರ್ಕಾರದವರು ಬಹಳ ನಿರ್ಲಕ್ಷ್ಯ ಮನೋಭಾವದಿಂದ ವರ್ತಿಸಿದ್ದಾರೆ. ಅವರನ್ನು ಬಹಳ ಕಡೆಗಣಿಸಿ ನೋಡಿದ್ದಾರೆ. ಇವರಿಂದ ಸರಕಾರದವರು ಈ ಕೆಲಸಗಳನ್ನು ಮಾಡಿಸಿಕೊಳ್ಳದಿದ್ದರೆ ಇವರಿಗೆ ಅವರೇನೂ ಕೊಡಬೇಕಾಗಿರಲಿಲ್ಲ. ಇನ್ನು ಪೋಟಿಗೆಯ ವಿಷಯಕ್ಕೆ ಬಂದರೆ— ಹಿಂದೆ ಪ್ರತಿ ಸಲವೂ 10 ವರ್ಷಗಳಿಗೊಂದಾವರ್ತಿ ಅಂದರೆ ದಶಸಾಲಿಗೊಮ್ಮೆ ಭೂಮಿಗಳನ್ನು ಪರೀಕ್ಷೆ ಮಾಡಿ ಯಾವುದು ಖುಷ್ಕಿಯಾಗಿದ್ದುದು ತರಿಯಾಗಿದೆ, ಯಾವುದು ತರಿಯಾಗಿದ್ದುದು ಈಗ ಬಾಗಾಯಿತಾಗಿದೆ, ಎಂಬುದನ್ನು ನೋಡಿ ಕಂದಾಯವನ್ನು ಪುನರ್ಪರಿಶೀಲನೆ ಮಾಡುತ್ತಿದ್ದರು. ಆ ಪ್ರಮಾಣಕ್ಕೆ ತಕ್ಕಂತೆ ಈ ಗ್ರಾಮಾಧಿಕಾರಿಗಳಿಗೂ ದಶಸಾಲಿಗೊಮ್ಮೆ ಇವರಿಗೆ ಕೊಡಲಾಗುತ್ತಿದ್ದ ಪೋಟಿಗೆಯನ್ನೂ ಹೆಚ್ಚು ಮಾಡುತ್ತಿದ್ದರು. ಹೀಗೆ ಇದನ್ನು 1944ರ ವರೆಗೂ ಮಾಡಿದ್ದಾರೆ. ಆದರೆ ಅಲ್ಲಿಂದೀಚೆಗೆ ಇದನ್ನು ಪಾವತಿ ಮಾಡಿಲ್ಲ. ಇನ್ನು ನಮ್ಮ ದೇಶದಲ್ಲಿ ಬಗರಹಾಗುವಳಿ ಮಾಡತಕ್ಕ ಜನರಿಂದ ಟಿ. ಟಿ. ವಸೂಲ್ಮಾಡಲು ಪಟೇಲ ಶ್ಯಾನುಭೋಗರೇ ಹೋಗಬೇಕಾಗಿದೆ. ಇದಕ್ಕೂ ಸಹಾ ಅವರಿಗೆ ಯಾವ ರೆಮ್ಯುನರೇಷನ್ನನ್ನೂ ಕೊಡುತ್ತಿರುವುದಿಲ್ಲ. ಹೀಗೆ ಇನ್ನೂ ದೇಶದಲ್ಲಿ ಆಗಿಂದಾಗ್ಗೆ ನಡೆಯತಕ್ಕ ಕ್ರಯವಿಕ್ರಯಗಳ ಸಂದರ್ಭದಲ್ಲಿ ಗ್ರಾಮಾಧಿಕಾರಿಗಳು ಬರೆಯತಕ್ಕ ಮ್ಯುಟೇಷನ್ ಸ್ಲಿಪ್ಪುಗಳ ಬಗ್ಗೆ ಪ್ರತಿಯೊಂದು ಸ್ಲಿಪ್ಪಿಗೂ ಶ್ಯಾನುಭೋಗರಿಗೆ 6 ಪೈಸೆಗಳಂತೆಯೂ ಮತ್ತು ಪಟೇಲರಿಗೆ 3 ಪೈಸೆಗಳಂತೆಯೂ ಕೊಡಲಾಗುತ್ತಿತ್ತು. ಇದನ್ನೂ ಸಹಾ ಈಗ ಕೊಡುತ್ತಿಲ್ಲ. ನನ್ನ ತಾಲ್ಲೂಕಿನಲ್ಲಂತೂ ಯಾರಿಗೂ ಈ ಹಣ ಬಂದಿಲ್ಲ. ಇದೇ ರೀತಿ ಮುಜರಾಯಿ ದೇವಸ್ಥಾನಗಳ ಜಮೀನಿನಿಂದ ಬರಬೇಕಾದ ಹಣವನ್ನು ಇವರು ವಸೂಲ್ಮಾಡುತ್ತಾರೆ. ಇದಕ್ಕೂ ಸಹಾ ಸರ್ಕಾರದವರು ಏನನ್ನೂ ಕೊಡುತ್ತಿಲ್ಲ. ಕೊನೆಗೆ ಇವರಿಗೆ ಟಿ. ಎ. ಮತ್ತು ಡಿ. ಎ. ಗಳನ್ನೂ ಸಹಾ ಕೊಡುತ್ತಿಲ್ಲ. ಇನ್ನು ದೇಶದಲ್ಲಿ ಎಲ್ಲೆಲ್ಲೀ ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟುತ್ತಿದ್ದಾರೆ. ಅವುಗಳ ಕಾಂಟ್ರಿಬ್ಯೂಷನ್ನನ್ನೂ ಕೂಡ ಇವರೇ ವಸೂಲ್ಮಾಡುತ್ತಿದ್ದಾರೆ. ಇದಕ್ಕೂ ಅವರಿಗೆ ಯಾವ ಸಂಭಾವನೆಯೂ ದೊರೆಯುತ್ತಿಲ್ಲ. ಇನ್ನು ಈ ದಿವಸ ಕಮ್ಯುನಿಟಿ ಡೆವಲಪ್‌ಮೆಂಟಿನ ಬಾಬಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಅಧಿಕಾರಿಗಳು ಒಳ್ಳೆಯ ಊಟ ಮತ್ತು ಹಾರತುರಾಯಿಗಳ ಆಸೆಯಿಂದ ವಿಪರೀತ ಸಾಲಗಳನ್ನು ಕೊಟ್ಟಿದ್ದಾರೆ. ಈಗ ಅವುಗಳ ವಸೂಲಿಗಾಗಿ ನೋಟೀಸನ್ನು ಕೊಡುತ್ತಿದ್ದಾರೆ. ಇವರು ಈ ದಿವಸ ಗ್ರಾಮಗಳಿಗೆ ಹೋದರೆ ಇವರಿಗೆ ಕುಡಿಯುವುದಕ್ಕೆ ನೀರೂ ಸಹ ಸಿಕ್ಕುವುದಿಲ್ಲ. ಇಂಥ ಸಂದರ್ಭದಲ್ಲಿ ಗ್ರಾಮಾಧಿಕಾರಿಗಳು ಈ ಸಾಲವನ್ನೂ ಸಹ ವಸೂಲ್ಮಾಡಬೇಕಾಗಿದೆ. ಇಷ್ಟೆಲ್ಲಾ ಇವರಿಂದ ಕೆಲಸ ಮಾಡಿಸಿಕೊಂಡು ಅವರಿಗೆ ಈಗ 14 ಲಕ್ಷ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳುತ್ತಿರುವುದು ಏತಕ್ಕೂ ಸಾಲದು. ಇದನ್ನು ಇನ್ನೂ ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಆದರೆ ಕೆಲವರಿಗೆ ಇವರ ಕಷ್ಟ ಏನೆಂಬುದೇ ತಿಳಿದಿಲ್ಲ. ಹೆರಕ್ಕವರ ಕಷ್ಟ ಬಂಜೆಗೇನು ಗೊತ್ತು ಎಂದು ಹೇಳತಕ್ಕ ಗಾದೆಗೆ ಸರಿಯಾಗಿ ಯಾರಿಗೆ ಈ ಗ್ರಾಮಾಧಿಕಾರಿಗಳ ಕಷ್ಟ ಗೊತ್ತಿಲ್ಲವೋ ಅಂಥವರು ಇದನ್ನು ವಿರೋಧಿಸಬಹುದು. ಈ ಎಲ್ಲ ಕಾರಣಗಳಿಂದ ಈ ಬಾಬಿಗೆ ಇನ್ನೂ ಹೆಚ್ಚಿಗೆ ಹಣವನ್ನು ಕೊಡಬೇಕಾದ್ದು ನ್ಯಾಯ.

ಇನ್ನು 15ನೇ ಡಿಮ್ಯಾಂಡಿನಲ್ಲಿ—ಆಹಾರ ಸರಬರಾಯಿ ಇಲಾಖೆಗೆ ಮೊದಲನೆಯ ಬಿಸ್ತಿನಲ್ಲಿ 393 ಜನರನ್ನೂ ಮತ್ತು ಎರಡನೆಯ ಬಿಸ್ತಿನಲ್ಲಿ 244 ಜನರನ್ನೂ ನೇಮಕಮಾಡಿಕೊಂಡಿದ್ದಾರೆ.

Sri G. V. GOWDA (Palya).—I want to know whether this amount is due to all Patels or to Patels of ex-Mysore area only.

ಶ್ರೀ ಸಿ. ಆರ್. ರಂಗೇಗೌಡ.—ದೇಶದಲ್ಲಿರತಕ್ಕ ಎಲ್ಲ ಪಟೇಲ, ಶ್ಯಾನುಭೋಗರಿಗೂ ಕೊಡಬೇಕು. ಇಲ್ಲಿ ಕೆಲವರು ಹೇಳಬಹುದು : ಇವರಿಗೆಲ್ಲಾ ಇನಾಂತಿ ಜಮೀನುಗಳನ್ನು ಕೊಡಲಾಗಿದೆ ಎಂದು. ಆದರೆ ಅನೇಕರಿಗೆ ಇನಾಂ ಜಮೀನುಗಳನ್ನು ಕೊಟ್ಟಿಲ್ಲ.

ನಾನು ಆಹಾರ ಸರಬರಾಯಿ ಇಲಾಖೆಗೆ ಜನರನ್ನು ನೇಮಕ ಮಾಡಿಕೊಂಡ ವಿಚಾರ ಹೇಳುತ್ತಿದ್ದೆ. ಹಿಂದೆ ಇದ್ದ ಕಂಟ್ರೋಲ್‌ನಲ್ಲಿ ನಾವೆಲ್ಲರೂ ಎಷ್ಟು ಕಷ್ಟವನ್ನು ಅನುಭವಿಸಿದ್ದೇವೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ದಿವಸ ಆಹಾರ ಧಾನ್ಯಗಳನ್ನು ಶೇಖರಣೆ ಮಾಡುವುದರಲ್ಲೂ ಮತ್ತು ಅವುಗಳನ್ನು ವ್ಯಾಪಾರಗಾರರಿಗೆ ಹಂಚುವುದರಲ್ಲೂ ಬಹಳ ಕಿರುಕುಳ ಕೊಡಲು ಇಲ್ಲಿ ಅವಕಾಶವಿದೆ. ನನಗೆ ಗೊತ್ತಿರುವಂತೆ ಈ ದಿವಸ ಈ ಆಹಾರದ ಹಂಚಿಕೆಯನ್ನು ಸಹಕಾರ ಸಂಸ್ಥೆಗಳ ಮೂಲಕ ಮಾಡದೆ ವರ್ತಕರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಈ ವಿಚಾರದಲ್ಲಿ ನನ್ನ ಬಳಿ ಒಂದು ಅರ್ಜಿ ಇದೆ. ಅದನ್ನು ಅಧ್ಯಕ್ಷರ ಮೂಲಕ ಸಂಬಂಧಪಟ್ಟ ಮಂತ್ರಿಗಳ ಕಡೆಗೆ ಕಳುಹಿಸುವ ಪ್ರಯತ್ನದಲ್ಲಿ ಇದ್ದೇನೆ. ಇದನ್ನು ಅರ್ಥಸಚಿವರು ಗಮನದಲ್ಲಿಟ್ಟುಕೊಂಡು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರದವರು ಹೊರಡಿಸಿರತಕ್ಕ ಒಂದು ಆಜ್ಞೆಯ ಪ್ರಕಾರ ಯಾರಲ್ಲಿ 40 ಕ್ವಿಂಟಾಲಿಗಿಂತ ಹೆಚ್ಚಿಗೆ ದಾಸ್ತಾನಿರುತ್ತದೋ ಅಂಥವರು ಒಂದು ಡಿಕ್ಲರೇಷನ್ ಕೊಡಬೇಕು ಎಂಬುದಾಗಿ ಅದರಲ್ಲಿ ತಿಳಿಸಿದೆ. ಈ ಆಜ್ಞೆಯನ್ನು ವರ್ತಕರಿಗೆ ಮಾಡಿದ್ದರೆ ಚೆನ್ನಾಗಿತ್ತು. ಇದನ್ನು ರೈತನಿಗೆ ಅನ್ವಯಿಸಬಾರದು ಎಂಬುದು ನನ್ನ ವಾದ.

ಒಂದು ಉದಾಹರಣೆಯನ್ನು ಹೇಳುತ್ತೇನೆ. ಈ ಸಾರಿ ನಮ್ಮ ಜಿಲ್ಲೆಯಲ್ಲಿ ಚನ್ನಪಟ್ಟಣ ತಾಲ್ಲೂಕು ಮಳೂರಿನಲ್ಲಿ ಒಬ್ಬ ರೈತ ತನ್ನ ಜಮೀನಿನಲ್ಲಿ ಬಹಳ ಚೆನ್ನಾಗಿ ಬೆಳೆ ಮಾಡುತ್ತಾ ಇದ್ದ. ಆತನ ಕೆಲಸ ಎಂದರೆ ಅವನು ತನ್ನ ಜಮೀನನ್ನು ಬಿಟ್ಟು ಹೊರಗೆ ಬರುವುದೇ ಇಲ್ಲ, ಬೆಳಗಿನಿಂದ ಸಾಯಂಕಾಲದವರೆಗೂ ಜಮೀನಿನಲ್ಲೇ ದುಡಿಯುವುದು ಅವನ ಕೆಲಸ. ಅವನು ಸಕಾಲದಲ್ಲಿ ಡಿಕ್ಲೇರ್ ಮಾಡಿಕೊಳ್ಳಲಿಲ್ಲ ಎಂದು ಹೇಳಿ ಆತನ ಮಳಿಗೆಯನ್ನು ಸೀಜ಼ ಮಾಡಿ ಅವನ ಮೇಲೆ ಕೋರ್ಟಿನಲ್ಲಿ ಕೇಸು ಹಾಕಿದರು. ತಿಂಗಳಾನುಗಟ್ಟಲೆ ಅವನು ಅಧಿಕಾರಿಗಳ ಮನೆಗೆ ಅಲೆಯಬೇಕಾಯಿತು. ಅವನು ಇಂತಹ ನಿಕೃಷ್ಟ ಸ್ಥಿತಿಗೆ ಬರುವುದಕ್ಕೆ ಸರ್ಕಾರದವರೇ ಕಾರಣ. ರೈತನ ಸ್ಥಿತಿ ಅವನಿಗೇ ಗೊತ್ತು. ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಊಟ ಕೂಡ ಮಾಡದೇ ಅವನು ಜಮೀನಿನ ಹತ್ತಿರ ದುಡಿಯುತ್ತಾ ಇರುತ್ತಾನೆ. ಅವನಿಗೆ ನಿಮ್ಮ ಕಾನೂನು, ನೋಟಿಫಿಕೇಷನ್‌ಗಳು ಗೊತ್ತಿರುವುದಿಲ್ಲ. ಈ ರೀತಿ ಕಟ್ಟುನಿಟ್ಟಾಗಿ ಅವನು ಡಿಕ್ಲೇರ್ ಮಾಡಿಕೊಳ್ಳಬೇಕೆಂದು ಹೇಳುವುದು ಸರಿಯಲ್ಲ. ಈ ರೀತಿ ಮಾಡಿದ್ದೇ ಆದರೆ ರೈತರೆಲ್ಲಾ ಒಗ್ಗಟ್ಟಾಗಿ ಡಿಕ್ಲೇರ್ ಮಾಡಿಕೊಳ್ಳುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಎಷ್ಟು ಬೇಕೋ ಅಷ್ಟನ್ನೂ ಮಾಡಿಕೊಳ್ಳುತ್ತಾರೆ. ವಿಶೇಷವಾಗಿ ತೆಂಗು, ಅಡಿಕೆ, ಬಾಳೆ ಇಂತಹ ಕಮರ್ಷಿಯಲ್ ಕ್ರಾಪ್ಸನ್ನು ಬೆಳೆದುಕೊಳ್ಳುತ್ತಾನೆ. ಇದರಿಂದ ಸರ್ಕಾರದ ಪಾಲಿಸಿಯೇ ತಿರುಗು ಮುರುಗು ಆಗುತ್ತದೆ. ಅಂತಹ ಸಂದರ್ಭದಲ್ಲಿ ಅದಕ್ಕೆ ಹೊಸದಾಗಿ ಒಂದು ಕಾನೂನು ಮಾಡಬೇಕಾಗಿ ಬರುತ್ತದೆ. ಇಂಥಿಂಥ ಜಮೀನಿನಲ್ಲಿ ಇಂತಿಂಥ ಬೆಳೆಯನ್ನೇ ಬೆಳೆಯಬೇಕೆಂದು ಕಡ್ಡಾಯ ಮಾಡಬೇಕಾಗಿ ಬರುತ್ತದೆ. ಮೂಗಿಗಿಂತ ಮೂಗುತಿ ಭಾರ ಎಂದು ನಮ್ಮ ಕಡೆ ಒಂದು ಗಾದೆ ಹೇಳುತ್ತಾರೆ. ಆ ರೀತಿ ಆಗಿ ರೈತರಿಗೆ ಇಲ್ಲದ ಸಲ್ಲದ ಕಷ್ಟ ಉಂಟಾಗುತ್ತದೆ. ಆ ರೀತಿ ಮಾಡುವುದಕ್ಕೆ ಬದಲಾಗಿ ಈ ನೋಟಿಫಿಕೇಷನ್‌ನ್ನು ವಾಪಸು ತೆಗೆದುಕೊಂಡು, ರೈತರ ಮೇಲೆ ಕಡ್ಡಾಯವಾಗಿ ಹೊರೆ ಹಾಕದೆ ಅವರಿಗೆ ಏನು ಸೌಕರ್ಯ ಬೇಕೋ, ಅನುಕೂಲ ಬೇಕೋ ಅದನ್ನು ಕೊಟ್ಟು ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಸಭಾಪತಿಯವರನ್ನು ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಅಧ್ಯಕ್ಷರೇ, ನಮ್ಮ ಆರ್ಥಿಕ ಸಚಿವರು ಮಂಡಿಸಿರತಕ್ಕಂಥ ಈ ಹೆಚ್ಚುವರಿ ಬೇಡಿಕೆಗಳನ್ನು ವಿಶ್ಲೇಷಣ ನೋಡಿದರೆ ನಮ್ಮ ರಾಜ್ಯದ ಹಣಕಾಸಿನ ಸ್ಥಿತಿ ಬಗ್ಗೆ ಒಂದು ಕಡೆ ಚಿಂತೆಗೆ ನಾವು ಒಳಗಾಗಬೇಕಾದ ಸಂದರ್ಭ ಇರತಕ್ಕದ್ದು ಭಾಸವಾಗುವುದಲ್ಲದೆ ಸರ್ಕಾರದ ನೀತಿಗಳ ಮೇಲೆ ಸರ್ಕಾರದ ಧೋರಣೆಗಳಲ್ಲಿ ಯಾವ ವಿಧವಾದಂಥ, ನಿರ್ದಿಷ್ಟವಾದಂಥ ತತ್ವಗಳ ಪ್ರತಿಪಾದನೆಯೂ ಕೂಡ ಇಲ್ಲ ಎನ್ನುವುದೂ ಸಹ ನಮಗೆ ವೇದ್ಯವಾಗುತ್ತದೆ. ಹೆಚ್ಚುವರಿ ಬೇಡಿಕೆಗಳ ಅರ್ಥವಾದರೂ ಕೂಡ ಯಾವ ಪರಿಸ್ಥಿತಿಯನ್ನು ಸರ್ಕಾರ ಸುಲಭವಾಗಿ ಊಹೆ ಮಾಡುವುದಕ್ಕೆ ಸಾಧ್ಯವಿಲ್ಲವೋ ಅಂತಹ ಪರಿಸ್ಥಿತಿಗಳನ್ನು ಎದುರಿಸುವುದಕ್ಕೆ ಹೆಚ್ಚುವರಿ ಬೇಡಿಕೆಗಳನ್ನು ಮಂಡಿಸತಕ್ಕಂಥ ಅವಕಾಶವನ್ನು ನಾವು ಮಾಡಿಕೊಂಡಿದೇವೆ. ಆದರೆ ಕಳೆದ ಮೂರು ವರ್ಷಗಳಲ್ಲಿ ನಾವು ಎದುರಿಸುತ್ತಾ ಇರತಕ್ಕ ಪರಿಸ್ಥಿತಿ ಆದರೂ ಕೂಡ ಸರ್ಕಾರ ಅವರ ಅವ್ಯವಹಾರಿಕವಾದ ಆರ್ಥಿಕ ನೀತಿಯ ಫಲವಾಗಿ ಈ ದಿವಸ 20 ಕೋಟಿ ರೂಪಾಯಿಗಳ ಹೆಚ್ಚುವರಿ ಬೇಡಿಕೆಗಳನ್ನು

ಸಭೆಯ ಮುಂದೆ ಮಂಡಿಸಿದ್ದಾರೆ, ಇದರ ಔಚಿತ್ಯವನ್ನು ನಾನು ಬಹು ಗಂಭೀರವಾಗಿ ಮತ್ತು ಬಹು ಒತ್ತಾಯ ಪೂರ್ವಕವಾಗಿ ಪ್ರಶ್ನಿಸಬೇಕಾಗಿದೆ. ಬಹು ಪ್ರಾಮುಖ್ಯವಾಗಿ ಎದ್ದು ಕಾಣತಕ್ಕ ಒಂದು ಬೇಡಿಕೆ ಎಂದರೆ ಆಹಾರದ ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕೆನ್ನತಕ್ಕ ದೃಷ್ಟಿಯಿಂದ ಸರ್ಕಾರದವರು ಒಂದು ಕೋಟಿ ರೂಪಾಯಿನಷ್ಟು ಆಹಾರ ಧಾನ್ಯವನ್ನು ಒದಗಿಸಿಕೊಳ್ಳುವುದಕ್ಕೆ ಶಿವಮೊಗ್ಗ ಜಿಲ್ಲಾಧಿಕಾರಿಗೆ ಕೊಡತಕ್ಕ ಹಣವನ್ನೂ ಕೂಡ ಈ ಒಂದು ಬೇಡಿಕೆಯಲ್ಲಿ ನಮೂದು ಮಾಡಿದ್ದಾರೆ. ದೇಶದಲ್ಲಿ ಆಹಾರ ಪರಿಸ್ಥಿತಿ ಈ ಸುಗ್ಗಿ ಕಾಲದಲ್ಲಿ ಏನಾಗಿದೆ, ಎಂತಾಗಿದೆ ಎನ್ನುವುದನ್ನೂ ಕೂಡ ನಾವು ವಿವೇಚಿಸಬೇಕಾಗಿದೆ. ನನ್ನ ಸ್ನೇಹಿತರು ಭಾಸ್ಕರಶೆಟ್ಟರು ಈಗತಾನೆ ಹೇಳುತ್ತಾ ಇದ್ದರು, ಮಂಗಳೂರು ಜಿಲ್ಲೆಯಲ್ಲಿ ಒದಗಿರತಕ್ಕ ಪರಿಸ್ಥಿತಿಯ ವಿಚಾರವನ್ನು. ರಾಜ್ಯಪಾಲರ ಭಾಷಣ ಈ ಸಭೆಯಲ್ಲಿ ಆಗುವಾಗ ಸರಕಾರದ ನೀತಿ ಇದರ ವಿಷಯದಲ್ಲಿ ಏನು ಎಂಬುದು ಸ್ಪಷ್ಟೀಕರಿಸಲ್ಪಟ್ಟಿದೆ. ಒಂದು ವಾಕ್ಯವನ್ನು ನಾನು ಇಲ್ಲಿ ಉದಹರಿಸಬಹುದಾದರೆ, ರಾಜ್ಯದೊಳಗೆ ಆಹಾರ ಧಾನ್ಯಗಳ ಸಾಗಾಟದ ಮೇಲಿದ್ದ ಎಲ್ಲಾ ನಿರ್ಬಂಧಗಳನ್ನೂ ತೆಗೆದು ಹಾಕಿದೆ. ಆದರೆ, ಆಹಾರ ಧಾನ್ಯಗಳನ್ನು ನಮ್ಮ ಗಡಿಗಳ ಮಾರ್ಗವಾಗಿ ಬೇರೆ ರಾಜ್ಯಗಳಿಗೆ ಅನಧಿಕೃತವಾಗಿ ಸಾಗಿಸುವುದನ್ನು ತಡೆಗಟ್ಟುವ ಉದ್ದೇಶದಿಂದ ಅನೇಕ ತಡೆ ಆಜ್ಞೆಗಳನ್ನು ಏರ್ಪಡಿಸಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ ತಾವು ನಿಮ್ಮ ನೀತಿಯನ್ನು ಸ್ಪಷ್ಟಪಡಿಸಿದ್ದೀರಿ. ಅದು ಅದ 8 ಅಥವಾ 15 ದಿವಸಗಳೊಳಗೆ ಸರ್ಕಾರದ ಆಜ್ಞೆಯನ್ನು ಅಥವಾ ಆ ನೀತಿಯನ್ನು ತಿದ್ದುಪಡಿ ಮಾಡಿದ್ದೀರಿ. ರಾಜ್ಯದೊಳಗೆ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಆಹಾರ ಪದಾರ್ಥಗಳು ಹೋಗುವುದನ್ನು ತಡೆಗಟ್ಟತಕ್ಕ ಆಜ್ಞೆ ಈ 15 ದಿವಸಗಳ ತರುಣದಲ್ಲೇ ಮಾಡಲ್ಪಟ್ಟಿರುವುದು ಇಲ್ಲಿ ವೇದ್ಯವಾಗತಕ್ಕ ಅಂಶ.

ಶ್ರೀ ಬಿ. ಡಿ. ಜತ್ತಿ.—(ಹಣ ಕಾಸಿನ ಶಾಖೆಯ ಮಂತ್ರಿಗಳು), ಸಂಪೂರ್ಣ ತಡೆಗಟ್ಟುವುದಿಲ್ಲ, ಒಬ್ಬ ಡೆಪ್ಯೂಟಿ ಕಮಿಷನರು ಇನೊಬ್ಬ ಡೆಪ್ಯೂಟಿ ಕಮಿಷನರಿಗೆ ಲಿಖಿತ ಮೂಲಕ ತಿಳಿಸಬೇಕು ತಿಳಿಸಿ ತೆಗೆದುಕೊಂಡು ಹೋಗಬೇಕು ಅಷ್ಟೆ ಇರುವುದು.

ಶ್ರೀ ಎಸ್. ಎಂ. ಕೃಷ್ಣ.—ಅಂತರ ಜಿಲ್ಲೆಗಳ ಮೇರೆ, ಆಹಾರ ಧಾನ್ಯಗಳ ಮೇಲೆ ಏನು ತಡೆ, ಅಥವಾ ನಿರ್ಬಂಧ ಇದೆ ಆ ನಿರ್ಬಂಧ ಕೆಲವು ಷರತ್ತುಗಳ ಮೇಲೆ ಇರಬಹುದು. ಆದರೆ ಅದರಿಂದ ಒಂದು ಅಂಶ ವೇದ್ಯವಾಗುತ್ತದೆ. ಅದೇನೆಂದರೆ, ಸರ್ಕಾರದಲ್ಲಿ ಆಹಾರದ ಪರಿಸ್ಥಿತಿಯ ಮೇಲೆ ಯಾವ ವಿಧವಾದ ಹತೋಟಿಯೂ ಇಲ್ಲ. ಎರಡನೆಯದು ಸರ್ಕಾರದಲ್ಲಿ ನಿರ್ದಿಷ್ಟವಾದ ಆಹಾರದ ಧೋರಣೆ ಈ ದಿವಸ ಕಾಣದಾಗಿದೆ. ಮೂರನೆಯದು ಸರ್ಕಾರದಲ್ಲಿ ಆಹಾರದ ಪರಿಸ್ಥಿತಿಯ ಬಗ್ಗೆ ಯಾವ ದೂರದೃಷ್ಟಿಯೂ ಕೂಡ ಇದುವರೆಗೂ ನಮಗೆ ಕಂಡುಬಂದಿಲ್ಲ. ಸೆಪ್ಟಂಬರ್, ಅಕ್ಟೋಬರ್ ಮತ್ತು ನವಂಬರ್ ತಿಂಗಳಿನಲ್ಲಿ ಈ ರಾಜ್ಯದಲ್ಲಿ ಆಹಾರದ ಹಾಹಾಕಾರ ಉಂಟಾಗಿತ್ತು. ಇವತ್ತು ಬೆಳಿಗ್ಗೆ ಮಾನ್ಯ ಗೃಹ ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಬಳ್ಳಾರಿಯಲ್ಲಿ ಆಹಾರದ ಕೊರತೆ ಇರಲಿಲ್ಲ, ಅಲ್ಲಿ ಕೊರತೆ ಇದ್ದುದ್ದೇ ಬೇರೇ ಏನೋ ಎಂದು ಹೇಳಿದರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪೋಲೀಸ್ ಶಾಖೆಗೆ ತಕ್ಕ ಹಾಗೆ ಒಂದು ರಾಜಕೀಯ ಪಕ್ಷದ ಮೇಲೆ ಪರೋಕ್ಷವಾಗಿ ಅವರ ಆಪಾದನೆಯನ್ನೂ ಕೂಡ ಮಾಡಿದರು. ಜನಗಳು ದಡ್ಡರಲ್ಲ. ಜನಗಳು ಇವತ್ತು ಚಿಂತನೆ ಮಾಡತಕ್ಕ ಶಕ್ತಿಯನ್ನು ಪಡೆದಿದ್ದಾರೆ, ಇದು ಜನಗಳ ಸಾವು, ಬದುಕಿನ ಪ್ರಶ್ನೆ. ನೀವು ಬಳ್ಳಾರಿ ಪಟ್ಟಣದಲ್ಲಿ ಆಹಾರದ ಅಭಾವ ಇಲ್ಲ ಎಂದು ಎಷ್ಟು ಧೈರ್ಯವಾಗಿ ಈಗ ಹೇಳುತ್ತಾ ಇದ್ದೀರೋ ಇದೇ ಮಾತನ್ನು ಸೆಪ್ಟಂಬರ್, ಅಕ್ಟೋಬರ್ ತಿಂಗಳಿನಲ್ಲಿ ಹೋಗಿ ಬಳ್ಳಾರಿ ಪಟ್ಟಣದಲ್ಲಿ ಒಂದು ಬಹಿರಂಗ ಸಭೆಯನ್ನು ಕರೆದು ಹೇಳಿದ್ದರೆ ನಿಮ್ಮ ಧೈರ್ಯವನ್ನು ಮೆಚ್ಚುತ್ತಾ ಇದ್ದೆ. ನಿಮ್ಮ ಕಾರಿನಲ್ಲಿ ಹೋಗಬೇಕಾದರೆ ಪೋಲೀಸ್ ಪಹರೆಯನ್ನು ಹಾಕಿಕೊಂಡು ಮೈಸೂರು ಸಂಸ್ಥಾನದಲ್ಲಿ ಸಂಚಾರ ಮಾಡ ಬೇಕಾದ ಪರಿಸ್ಥಿತಿ ಆ ದಿವಸ ಇತ್ತು. ನೀವು ಎಲ್ಲಿಯವರೆಗೆ ದೂರದೃಷ್ಟಿ ಇಲ್ಲದಂತಹ ಆಹಾರ ಧೋರಣೆಯನ್ನು ಅನುಸರಿಸುತ್ತೀರೋ ಅಲ್ಲಿಯವರಿಗೂ ಕೂಡ ಈ ರಾಜ್ಯದಲ್ಲಿ ಈ ಆಹಾರದ ಅಭಾವದ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಈ ದಿವಸ ಆಡಬೇಕಾಗಿದೆ. ಒಂದು ಅರ್ಥರಹಿತವಾದ ಆಜ್ಞೆಯಿಂದ ಯಾವ ಸರ್ಕಾರದ ಅಧಿಕಾರಿಗಳಿಗೂ ಕೂಡ ಏನು ಮಾಡಬೇಕು ಎನ್ನುವುದು ತೋಚದಾಗಿದೆ. ಒಂದು ಕಡೆ ಕೇಂದ್ರ ಸರ್ಕಾರದ ಆಹಾರ ಧಾನ್ಯಗಳ ಕಾರ್ಪೊರೇಷನ್—ಅದು ಟಿ. ಎ. ಪೈ ಅವರ ಕಾರ್ಪೊರೇಷನ್—ಅವರು ಆಹಾರ ಧಾನ್ಯಗಳನ್ನು ಕೊಂಡು ಅವರ ಮಳಿಗೆಗಳಲ್ಲಿ ಇಡುತ್ತಾರಂತೆ. ಅದನ್ನು ಹಂಚಿಗೆ ಮಾಡತಕ್ಕ ವ್ಯವಸ್ಥೆಯನ್ನು ಅವರು ಮಾಡುತ್ತಾರಂತೆ. ಮತ್ತೊಂದು ಕಡೆ ರಾಜ್ಯ ಸರ್ಕಾರದವರು ಕೋ-ಆಪರೇಟೀವ್ ಸೊಸೈಟಿಗಳ ಮೂಲಕ, ಮಿಲ್ ಮಾಲೀಕರುಗಳ ಮೂಲಕ ಮತ್ತು ಇನ್ನೂ ಹಲವಾರು ಏಜೆನ್ಸಿಗಳ ಮೂಲಕ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುತ್ತೇವೆ ಎಂದು ಹೇಳುವುದನ್ನು ಆಗಿಂದಾಗ್ಗೆ ಕೇಳುತ್ತಾ ಇದ್ದೇವೆ. ನಾನು ಈ ದಿವಸ ಬಹು ಕಳಕಳಿಯಿಂದ ರಾಜ್ಯ ಸರ್ಕಾರದವರಿಗೆ

(ಶ್ರೀ ಎಸ್. ಎಂ. ಕೃಷ್ಣ)

ಎಚ್ಚರಿಕೆಯನ್ನು ಕೊಡಲು ಇಷ್ಟಪಡುತ್ತೇನೆ. ಈ ಬೇಜವಾಬ್ದಾರಿತನದ ಆಹಾರ ನೀತಿಯನ್ನು ಮುಂದುವರಿಸಿಕೊಂಡು ಈ ಸರ್ಕಾರ ಹೋದದ್ದೇ ಆದರೆ ಇನ್ನು ಮೂರು ನಾಲ್ಕು ತಿಂಗಳಿನಲ್ಲಿ ಈ ರಾಜ್ಯದಲ್ಲಿ ಒಂದು ದೊಡ್ಡ ಆಹಾರದ ಗಂಡಾಂತರ ಪರಿಸ್ಥಿತಿ ಒದಗಿ ಬಂದೀತು, ಅಂಥಾದ್ದನ್ನು ನಿವಾರಿಸುವುದಕ್ಕೆ ಈ ದಿವಸ ಎಲ್ಲ ಏರ್ಪಾಡುಗಳನ್ನು ಮಾಡಿಕೊಳ್ಳಬೇಕಾಗುತ್ತದೆ ಎನ್ನುವ ಮಾತನ್ನು ಇಲ್ಲಿ ಆಡಬೇಕಾಗಿದೆ.

ಇದನ್ನು ನಾನು ಮೂಢತನದಿಂದ ಆಡುತ್ತಾ ಇಲ್ಲ, ಪತ್ರಿಕೆಗಳಲ್ಲಿ ನೋಡಿ. ಅವರು ಯಾವಾಗಲೂ ಕೂಡ ನೈಜವಾದ ಸಮಾಚಾರಗಳನ್ನು ಪ್ರತಿಬಿಂಬಿಸುವುದಿಲ್ಲ ಎಂಬ ವಾದ ಬೇರೆ, ಆ ವಾದದಲ್ಲಿ ತಿರುಳಿಲ್ಲ, ಹುರುಳಿಲ್ಲ. ಆ ವಾದದಲ್ಲಿ ಅರ್ಥವೂ ಸಹಿತ ಇಲ್ಲ.

10–30 P.M.

ಚಿತ್ರದುರ್ಗದ ಜನರು ಆಹಾರದ ಅಭಾವದಿಂದ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆಂದು ಪತ್ರಿಕೆಗಳಲ್ಲಿ ಓದಿದ್ದೇವೆ. ಈ ಸರಕಾರದ ಭಕ್ತರಾದ ಶ್ರೀ ಮಾದಯ್ಯ ಗೌಡರಿರುವ ತಾಲ್ಲೂಕಿನಲ್ಲಿ, ರಾಮನಗರದಲ್ಲಿ ಅಂಗಡಿಗಳಲ್ಲಿ ಅಕ್ಕಿಯ ಅಭಾವವಿದೆ. ಸುಗ್ಗಿಯ ಕಾಲದಲ್ಲೇ ಆಹಾರದ ಅಭಾವ ಉಂಟಾಗಿ ಇಂಥ ಉತ್ಕಟ ಪರಿಸ್ಥಿತಿ ಇದ್ದರೆ ಮುಂದೇನು ಗತಿ ? ಇದನ್ನು ನೋಡಿದರೆ ಈ ದೇಶದಲ್ಲಿ ಅನಾಯಕತ್ವವನ್ನುಂಟುಮಾಡಬೇಕೆಂದು ಆಲೋಚನೆ ಮಾಡಿರುವರೋ ಎಂದು ಕೇಳಬೇಕಾಗಿದೆ. ಆಹಾರ ಪದಾರ್ಥಗಳ ಬಗ್ಗೆ ಸರಕಾರಿ ಆಜ್ಞೆ ತಿದ್ದುಪಡಿ ಮಾಡಿದ ಕೂಡಲೆ ಮಂಗಳೂರು ಪೇಟೆಯಲ್ಲಿ ಅಕ್ಕಿಯ ಬೆಲೆ ಇದ್ದಕ್ಕಿದ್ದ ಹಾಗೆ ಏರಿ ತದ್ವಿರುದ್ಧವಾದ ಪರಿಣಾಮ ವುಂಟಾಗಿದೆ; ಒಂದು ಕೆ.ಜಿ.ಗೆ ಒಂದು ರೂಪಾಯಿ ಹತ್ತುಪೈಸೆ ಬೆಲೆ ಆಗಿದೆ. ನಾವಿಲ್ಲಿ ಕುಳಿತಿರುವುದು ಈ ದೇಶದ ಬಡಬೋರೇಗೌಡನ ಅಥವ ಬಡ ಬಸಪ್ಪನ ಹೊಟ್ಟೆಯ ಪ್ರಶ್ನೆ ನಿವಾರಣೆ ಮಾಡುವುದಕ್ಕೆ. ರಾಜ್ಯದ ಹಿತಚಿಂತನೆಯ ಪ್ರಶ್ನೆ ಬಂದಾಗ ನಾವು ಯಾವ ಪಕ್ಷವನ್ನೂ ಕಟ್ಟಿಕೊಳ್ಳುವುದು ಬೇಡ. ನಾನು ಸರಕಾರಕ್ಕೆ ಗಂಭೀರವಾಗಿ ಸೂಚಿಸುವುದಿಷ್ಟೆ : ಕಳೆದ ಸೆಪ್ಟಂಬರಿನಿಂದೀಚೆಗೆ ಇತ್ತ ಕಡೆ ಅದರಲ್ಲೂ ಆಹಾರದ ವಿಚಾರದಲ್ಲೇನು ಧೋರಣೆ ತಾಳಬೇಕು, ಸುಧಾರಣೆ ತರಬಹುದು ಎಂಬ ವಿಚಾರದಲ್ಲಿ ನಮ್ಮನ್ನು ಯಾರೂ ಕೂಡ ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ಕೇಳಿ ಯಾವ ಸಮಾಲೋಚನೆಯನ್ನೂ ಸಹ ನಡೆಸಿರುವುದಿಲ್ಲ, ಅಂದಮೇಲೆ ಈ ರಾಜ್ಯದ ಎಲ್ಲ ವ್ಯವಹಾರಗಳನ್ನೂ ಸಂಪೂರ್ಣವಾಗಿ ನೀವು ನೀವೆ ವಹಿಸಿ ರೂಪಿಸಿಕೊಂಡು ಯಾವುದೋ ಒಂದು ನೀತಿಯ ಮೇಲೆ ಮುಂದುವರಿಯುತ್ತಿರುವಂತೆ ಕಾಣುತ್ತದೆ. ಈ ದಿವಸ ನಾನು ಮೈಸೂರು ಸರಕಾರಕ್ಕೆ ಎಚ್ಚರಿಕೆ ಕೊಡುವುದು ಜೊತೆಗೆ ಬಳ್ಳಾರಿಯಲ್ಲುಂಟಾದ ಅಶಾಂತಿಯುತವಾದ ವಾತಾವರಣಕ್ಕೆ ಎಡೆಕೊಡಬಾರದೆಂದು ಒತ್ತಾಯಪೂರ್ವಕವಾಗಿ ಸೂಚಿಸುತ್ತೇನೆ.

ಎರಡನೆಯದಾಗಿ, ನಮ್ಮ ಸರಕಾರದ ಆಡಳಿತ ಎಷ್ಟು ಸಡಿಲವಾಗಿದೆಯೆಂದರೆ, ನಮ್ಮ ರಾಜ್ಯದಲ್ಲಿರುವ ಕೆಲಕೆಲವು ಭಾರಿ ಮಿಲ್ಲುಗಳ ಮಾಲೀಕರ ಹಾವಳಿ ಜೋರಾಗಿದೆ. ಇವತ್ತು ಆಹಾರಧಾನ್ಯಗಳವಟ್ಟಿಗೆ ಮಾತನಾಡುವುದಾದರೆ, ಮಿಲ್ ಮಾಲೀಕರೇನಿದ್ದಾರೆ ಅವರಿಗೆ ನೀವು ಅನುಕೂಲ ಮಾಡಿಕೊಟ್ಟಿದ್ದೀರಿ. ಹಾಗೆ ಅನುಕೂಲ ಪಡೆದಿರುವ ಕೆಲವು ಮಿಲ್ ಮಾಲೀಕರ ಹೆಸರುಗಳನ್ನು ಸಹ ನಾನು ಹೇಳಬಲ್ಲೆ. ರೈತರಿಗೆ ಸುಗ್ಗಿಯ ಕಾಲದಲ್ಲಿ ಮಿಲ್ಲಿನವರು ಮುಂಗಡವಾಗಿ ಹಣ ಕೊಟ್ಟು, ಧಾನ್ಯದ ರೂಪದಲ್ಲಿ ಅದನ್ನು ಅವರಿಂದ ವಸೂಲುಮಾಡುತ್ತಾರೆ. ಹಾಗೆ ಮಾಡಿ ತಾವು ಪಡೆದ ಧಾನ್ಯವನ್ನು ಕಳ್ಳಪೇಟೆಯಲ್ಲಿ ಮಾರುತ್ತಿದ್ದಾರೆ. ಸೆಪ್ಟಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ಕೂಡ ಬಿಳಿಪೇಟೆಯಲ್ಲಿ ಸಿಕ್ಕದಿದ್ದ ಅಕ್ಕಿ ರೂ. 1-80 ಕೊಟ್ಟರೆ ಕಳ್ಳಪೇಟೆಯಲ್ಲಿ ಸಿಕ್ಕುತ್ತಿತ್ತು ಎಂದು ಹೇಳುವಾಗ ಅಕ್ಕಿ ಇಲ್ಲವೆಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಅಕ್ಕಿ ಇದೆ, ಆದರೆ ಕೆಲವರು ಬಚ್ಚಿಟ್ಟು ಹೆಚ್ಚು ಬೆಲೆಗೆ ಮಾರುತ್ತಿದ್ದಾರೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಂದ ಸರ್ಕಾರಕ್ಕೆ ನೆರವಾಗುತ್ತಿದೆ ಅಥವ ಸರ್ಕಾರದ ದುರ್ಬಲತೆಯಿಂದ ಮಿಲ್ ಮಾಲೀಕರಮೇಲೆ ಮತ್ತು ಸಮಾಜಘಾತಕ ವ್ಯಕ್ತಿಗಳ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಸರಕಾರಕ್ಕೆ ಇಷ್ಟವಿಲ್ಲ ಅಥವ ಶಕ್ತಿ ಇಲ್ಲ. ದಿನ ಪತ್ರಿಕೆಗಳಲ್ಲಿ ದಿನಬೆಳಗಾದರೆ 3 ಚೀಲ ಅಕ್ಕಿ ವಶಪಡಿಸಿಕೊಂಡರು ಎಂದು ಓದುತ್ತಿರುತ್ತೇವೆ. ಸಹಸ್ರಾರು ಮೂಟೆ ಕೇರಳ, ಮಹಾರಾಷ್ಟ್ರ ಮುಂತಾದ ಕಡೆಗಳಿಗೆ ಹೋಗುವುದನ್ನ ನೋಡಿಯೂ ಸುಮ್ಮನಿರುತ್ತಾರೆ. ಯಾರೋ 3 ಚೀಲ 4 ಚೀಲ ಸಾಗಿಸುವ ಸಣ್ಣ ವರ್ತಕರನ್ನು ಮಾತ್ರ ಹಿಡಿದು ಅದನ್ನು ಪತ್ರಿಕೆಗಳಲ್ಲಿ ದೊಡ್ಡದಾಗಿ ಪ್ರಚಾರ ಮಾಡುತ್ತಾರೆ. ಕಳೆದ ಆರು ತಿಂಗಳಿಂದ ಎಷ್ಟು ಜನ ಮಿಲ್ ಮಾಲೀಕರಮೇಲೆ ಕ್ರಮ ತೆಗೆದುಕೊಂಡಿರಿ ? ಹಿಂದೆ 3 ತಿಂಗಳ

ಕೆಳಗೆ ಆಹಾರಮಂತ್ರಿಗಳಿಗೆ ಮದ್ದೂರು ತಾಲ್ಲೂಕಿನಲ್ಲಿ ಒಬ್ಬ ದೊಡ್ಡ ಮಾಲೀಕ ಸಹಸ್ರಾರು ಮೂಟೆ ಅಕ್ಕಿ ದಾಸ್ತಾನು ಮಾಡಿದ್ದಾನೆಂದು ಹೇಳಿದೆ. ಆಗ ಅದು ಕುಸುಬಲು ಅಕ್ಕಿ ಎಂದು ಕೃಷ್ಣಪ್ಪನವರು ಹೇಳಿದರು. ಎಂಥಾದ್ದಾದರೂ ಆಗಲಿ ಜನರಿಗೆ ಬೇಕಾಗಿರುವುದು ಅಕ್ಕಿ. ಅತ ಡಿಕ್ಲೇರ್ ಮಾಡಿರುವುದಕ್ಕಿಂತ ಜಾಸ್ತಿ ಇದ್ದರೆ ವಶಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ನೀವು ಬಾಯಲ್ಲಿ ಹೇಳುವ ಸಮಾಜವಾದ ತತ್ವಕ್ಕೆ ಅರ್ಥವಿರುವುದಿಲ್ಲ. ಸಮಾಜವಾದಕ್ಕೆ ಬೆಂಬಲವಿರುವಾಗ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಉಳಿದುಕೊಂಡು ದೇಶದ ಶೇಕಡ 80 ಜನರು ಕಷ್ಟ ಪಡವುದು ಉಚಿತವಲ್ಲ. ನಿಮಗೆ ಸಮಾಜವಾದದಲ್ಲಿ ನಂಬಿಕೆಯಿರುವುದಾದರೆ, ನೇರವಾಗಿ ಮಿಲ್ ಮಾಲೀಕರಮೇಲೆ ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ಪ್ರಕಾರ ಕ್ರಮ ಕೈಕೊಳ್ಳಬೇಕು. ಕೆಲವು ಜನ ಕಮ್ಯೂನಿಸ್ಟರನ್ನು ಸೆರೆಮನೆಯಲ್ಲಿಟ್ಟಿದ್ದಾರೆ. ಈ ಮಾನ್ಯ ಸಭೆಯ ಸದಸ್ಯರಾದ ಕೃಷ್ಣಶೆಟ್ಟರು ಅವರಲ್ಲೊಬ್ಬರು, ಅವರಿಗೆ ಹೃದ್ರೋಗವಿದೆ.

[MR. SPEAKER in the Chair.]

ಅವರು ಬುಡಮೇಲು ಮಾಡುತ್ತಾರೆಂದು ಅವರನ್ನು ಜೈಲಿನಲ್ಲಿಟ್ಟಿದ್ದೀರಿ.

MR. SPEAKER.—I hope that he will be back in the House very soon. I have received a communication that he has very much improved.

ಶ್ರೀ ಎಸ್. ಎಂ. ಕೃಷ್ಣ.—ಈ ದಿವಸ ದೇಶಕ್ಕೆ ಬೇನೆ ಮಿಲ್ ಮಾಲೀಕರು ಮತ್ತು ಭಾರಿ ಜಮೀನುದಾರರು, ಈ ಎರಡು ವ್ಯಕ್ತಿಗಳ ಮೇಲೆ ಎಲ್ಲಿಯವರೆಗೆ ಹತೋಟಿಯನ್ನಿಟ್ಟುಕೊಳ್ಳುವುದಕ್ಕೆ ಈ ಸರಕಾರಕ್ಕೆ ಶಕ್ತಿಯಿರುವುದಿಲ್ಲವೋ ಅಲ್ಲಿಯವರೆಗೆ ಆಹಾರ ಪರಿಸ್ಥಿತಿ ಸುಗಮವಾಗುವುದಿಲ್ಲ.

ಎರಡನೆಯದು ರೈತಾಪಿ ಪ್ರಶ್ನೆ. ಇತ್ತೀಚೆಗೆ ಮಾಡಿರುವ ಸರಕಾರಿ ಆಜ್ಞೆಯಲ್ಲಿ ಪ್ರತಿಯೊಬ್ಬ ರೈತನೂ ಕೂಡ ಒಂದು ಎಕರೆಗೆ ಒಂದು ಕ್ವಿಂಟಾಲ್ ಬತ್ತ ಕೊಡಬೇಕು, ಮತ್ತು ಜಾಸ್ತಿ ಜಮೀನಿರುವವರು ಅದಕ್ಕೆ ತಕ್ಕಹಾಗೆ ಸರಕಾರಕ್ಕೆ ಕೊಡಬೇಕು ಎಂದು ಸೂಚಿಸಿದ್ದಾರೆ. ಆದರೆ ಈ ಆಜ್ಞೆ ಮಾಡಿರುವುದು ಯಾವಾಗ ? 8 ದಿವಸಗಳ ಕೆಳಗೆ. ಈ ದಿವಸ ಸುಗ್ಗಿ ಷುರುವಾಗಿದೆ. ಇದುವರೆಗೂ ಸರಕಾರ ನಿದ್ರೆಮಾಡುತ್ತಿತ್ತೆ ? ಸುಗ್ಗಿ ಷುರುವಾಗವುದರೊಳಗಾಗಿ ಆಜ್ಞೆ ಹೊರಡಿಸಲು ಸರಕಾರಕ್ಕೆ ಆಸಕ್ತಿ ಇರಲಿಲ್ಲವೇ ಎಂದು ಒತ್ತಾಯವಾಗಿ ಪ್ರಶ್ನೆಮಾಡಬೇಕಾಗಿದೆ. ಕೋಟೆಬಾಗಿಲನ್ನು ಊರೆಲ್ಲಾ ಸೂರೆಯಾದಮೇಲೆ ಹಾಕುವ ನೀತಿಯನ್ನನುಸರಿಸುತ್ತಿದ್ದಾರೆ. ನಿಮ್ಮ ವ್ಯವಹಾರ ಹಿಂದೆ ನೋಡಿದ್ದೇವೆ. ಎಲ್ಲ ವ್ಯವಹಾರವೂ ಇದೇ ಮಾದರಿ ಇದೆ. ಇವತ್ತು ಬತ್ತ ದಾಸ್ತಾನಿಡಬೇಕು. ಎಲ್ಲಿ ದಾಸ್ತಾನಿಡುವುದು ? ಎಲ್ಲಾ ಅನಾಯಕತ್ವವಾಗಿದೆ. 2-3 ಎಕರೆ ಇರುವ ರೈತರಿಗೆ ರಿಯಾಯ್ತಿ ತೋಚಿಸುವುದು ಧರ್ಮ, ನ್ಯಾಯ ಎಂದು ರಾಜ್ಯಪಾಲರ ಭಾಷಣಕ್ಕೆ ವಂದನೆ ಅರ್ಪಿಸುವ ನಿರ್ಣಯ ಚರ್ಚೆಯಾಗುವಾಗಲೇ ಹೇಳಿದ್ದೇವೆ. ಆದರೆ ನಮ್ಮ ಸರಕಾರಕ್ಕೆ ಆಹಾರ ವಿತರಣೆಯ ನಿರ್ವಹಣೆ ವಿಚಾರದಲ್ಲಿ ಯಾರು ವಿವೇಕ ಹೇಳುತ್ತಾರೋ ಅರ್ಥವಾಗುವುದಿಲ್ಲ. ಯಾರಾದರೂ ತಿಳಿದ ಜನರನ್ನು ಕೇಳಿ ಆಹಾರ ನೀತಿಯನ್ನು ನಿರೂಪಣೆ ಮಾಡುವುದಕ್ಕಿರುವ ಅಡ್ಡಿ ಆತಂಕವೇನು ? ಕೆಲವು ಕಡೆ 1 ಎಕರೆಗಳಿಗೆ ಮೇಲ್ಪಟ್ಟಿರುವವರು 8 ಅಥವ 6 ಕ್ವಿಂಟಾಲ್ ಕೊಡಬೇಕೆಂದು ತಿಳಿಸಿದ್ದಾರೆ. ಇದು ಅರ್ಥರಹಿತ ಆಜ್ಞೆ. ಮಂಡ್ಯದಲ್ಲಿ ಪ್ಯಾಕೇಜ್ ಪ್ಲಾನಿದೆ. ಅಲ್ಲಿಂದ ಅಂಕಿಅಂಶ ಒಂದು ಎಕರೆಗೆ ಇಷ್ಟು ಬೆಳೆಯಬಹುದು ಎಂದು ಬರುತ್ತದೆ. ಅವರು ಅದನ್ನು ಟೈಪ್‌ಮಾಡಿ ತಿಳಿಸುತ್ತಾರೆ. ಆದರೆ ಅದರಂತೆ ಬೆಳೆದಿದ್ದರೆ ಆಹಾರ ಅಭಾವವೇ ಇರುತ್ತಿರಲಿಲ್ಲ. ಆಜ್ಞೆ ಮಾಡುವಾಗ ನ್ಯಾಯ ರೀತಿಯಲ್ಲಿ ಮಾಡಬೇಕು.

15ನೇ ಡಿಮಾಂಡ್‌ನಲ್ಲಿ ಏಳು ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ಸಿಬ್ಬಂದಿಗೋಸ್ಕರ ಕೇಳಿದ್ದಾರೆ. ಆಹಾರ ಪರಿಸ್ಥಿತಿ ದಿನೇ ದಿನೇ ಕೆಡುತ್ತಿದೆ, ಚೈನಾದವರು ಧಾಳಿ ಮಾಡಲಕ್ಕೆ ಬರುತ್ತಿದ್ದಾರೆ, ಪಾಕಿಸ್ತಾನದವರೂ ಅದಕ್ಕೆ ಹವಣಿಸುತ್ತಿದ್ದಾರೆ, ಅದ್ದರಿಂದ ಆಹಾರ ಪದಾರ್ಥಗಳನ್ನು ಸಂಗ್ರಹಿಸುವುದಕ್ಕೋಸ್ಕರ ಸ್ಟೇಷನ್ ವ್ಯಾಗನ್‌ಗಳೇನು, ಅಂಬಾಸಡರ್ ಕಾರುಗಳೇನು ಜೀಪುಗಳೇನು ಇವೆಲ್ಲ ಬೇಕು ಎಂದು ಹೇಳಿದ್ದಾರೆ. ಮತ್ತೆ ಎಷ್ಟು ಜನ ಸಿಬ್ಬಂದಿಯನ್ನು ನೇಮಕ ಕೂಡ ಮಾಡಿದ್ದಾರೆ. ಈ ರಾಜ್ಯದಲ್ಲಿ ಹೇಳುವವರು ಕೇಳುವವರು ಯಾರಾದರೂ ಇದ್ದಾರೆಯೋ ಅಥವಾ ಏನು ಮಾಡಿದರೂ ಕೂಡ ಈ ರಾಜ್ಯದಲ್ಲಿ ನಡೆದು ಹೋಗುತ್ತದೆ ಎನ್ನುವ ಅಭಿಪ್ರಾಯ ನಿಮಗೆ ಬಂದಿದೆಯೋ ನನಗೆ ಅರ್ಥವಾಗುವುದಿಲ್ಲ. ಹಿಂದೆ ಪ್ರಧಾನ ಮಂತ್ರಿಗಳು ಲೋಕ ಸಭೆಯಲ್ಲಿ

(ಶ್ರೀ ಎಸ್. ಎಂ. ಕೃಷ್ಣ)

ಅಪ್ಪಣೆ ಕೊಡಿಸಿದರು, ಅಭಿವೃದ್ಧಿ ಬ್ಲಾಕುಗಳಲ್ಲಿರತಕ್ಕ ಜೀಪುಗಳನ್ನೆಲ್ಲ ವಾಪಸು ತೆಗೆದುಕೊಳ್ಳುತ್ತೇವೆ ಎಂದು. ನಾನು 1962ನೆ ಇಸವಿಯಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾದ ತಕ್ಷಣದಲ್ಲಿ ಹೇಳಿದೆ: ನಮ್ಮಲ್ಲಿರತಕ್ಕ ಎಲ್ಲ ಜೀಪುಗಳನ್ನು ಕೂಡ ತೆಗೆದುಕೊಂಡು ಅವುಗಳನ್ನು ಅಗತ್ಯವಿರುವ ಕಡೆಗೆ ಕಳಿಸಿ, ಆ ಜೀಪುಗಳು ಏನೂ ಕೆಲಸ ಮಾಡುತ್ತಿಲ್ಲ ಎಂದು ಹೇಳಿದೆ. ಆದರೆ ನೀವು ಹೇಳುವುದನ್ನು ಹೇಳಿ, ನಾವು ಮಾಡುವುದನ್ನು ಮಾಡುತ್ತೇವೆ ಎನ್ನುವಂತೆ ಮಾಡುತ್ತಿದ್ದೀರಿ. ಈಗ ಆಹಾರೋತ್ಪತ್ತಿಯನ್ನು ಹೆಚ್ಚಿಸಲು ಸ್ಟೇಷನ್ ವ್ಯಾಗನಗಳು ಬೇಕು, ಅಂಬಾಸೆಡರ್ ಕಾರುಗಳು ಬೇಕು, ಜೀಪುಗಳು ಬೇಕು ಎಂದು ಹೇಳಿದ್ದೀರಿ. ಜೀಪುಗಳ ವಿಷಯ ಬಂದಾಗ ಮೊನ್ನೆ ತಾನೆ ನಡೆದ ಒಂದು ಘಟನೆಯನ್ನು ಈ ಸಭೆಯ ಗಮನಕ್ಕೆ ತರಲು ನಾನು ಇಚ್ಛಿಸುತ್ತೇನೆ. ಮೊನ್ನೆ ಇಡೀ ದೇಶದಲ್ಲಿ ಗಣರಾಜ್ಯೋತ್ಸವ ವನ್ನು ಬಹಳ ಸಂಭ್ರಮದಿಂದ ಆಚರಿಸಿದೆವು. ಮದ್ದೂರು ತಾಲ್ಲೂಕಿನಲ್ಲಿ ಎರಡು ಅಭಿವೃದ್ಧಿ ಬ್ಲಾಕ್ ಗಳಿವೆ. ಆ ಎರಡು ಬ್ಲಾಕುಗಳಲ್ಲಿಯೂ ಒಂದೊಂದು ಜೀಪು ಇದೆ. ಮದ್ದೂರಿನ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಬಹಳ ಮಮತೆ. ಮುಖ್ಯ ಮಂತ್ರಿಗಳು ಇಲ್ಲಿ ಇರತಕ್ಕ ಕಾಲದಲ್ಲಿ ಈ ಒಂದು ಘಟನೆಯನ್ನು ಅವರ ಗಮನಕ್ಕೆ ತರುತ್ತೇನೆ. ಇದು ಈ ಸರ್ಕಾರಕ್ಕೆ ಮರ್ಯಾದೆಯನ್ನು ತರತಕ್ಕ ಘಟನೆ ಎಂತಾದೀತು, ಇಂಥದ್ದನ್ನು ತಪ್ಪಿಸಬೇಕು ಎಂದು ಹೇಳುತ್ತಿದ್ದೇನೆ. ಮದ್ದೂರು ಮುನಿಸಿ ಪಲ್ ಕೌನ್ಸಿಲ್‌ನವರು ಗಣರಾಜ್ಯೋತ್ಸವವನ್ನು ವೈಭವದಿಂದ ಆಚರಣೆ ಮಾಡಬೇಕೆಂದು ಅದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿ ಗಣರಾಜ್ಯೋತ್ಸವಕ್ಕೆ ಸ್ಫೂರ್ತಿಯನ್ನು ಕೊಡತಕ್ಕ ಕೆಲವು ದೃಶ್ಯ ನಿರೂಪಣೆ (ಟ್ಯಾಬ್ಲೋ) ಗಳನ್ನು ಕಿತ್ತೂರಿನ ವೀರ ರಾಣಿ ಚೆನ್ನಮ್ಮಾಜಿ ಮುಂತಾದ ದೃಶ್ಯಗಳನ್ನು ತಯಾರಿಸಿ ಎಲ್ಲ ರಸ್ತೆಗಳಲ್ಲಿಯೂ ಮೆರವಣಿಗೆ ಮಾಡಿ ಜನಗಳಿಗೆ ಸ್ಫೂರ್ತಿಯನ್ನುಂಟುಮಾಡಬೇಕು ಎಂದು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರನ್ನು ಜೀಪ್‌ಗಳನ್ನು ಕೊಡಬೇಕು ಎಂದು ಕೇಳಿದ್ದರು. ಅವರು ಜೀಪ್ ಮತ್ತು ಟ್ರೇಲರನ್ನು ಕೊಡುತ್ತೇವೆಂದು ಕಾಗದದ ಮೂಲಕ ಸಮ್ಮತಿಯನ್ನು ಕೊಟ್ಟು, ಮಾರನೆಯ ದಿವಸ ಗಣರಾಜ್ಯೋತ್ಸವದ ದಿನ 9 ಗಂಟೆಗೆ, ಮೆರವಣಿಗೆ ಹೊರಡುವುದಕ್ಕೆ ಅಣಿಯಾಗಿದ್ದಾಗ ಜೀಪ್ ಕೊಡುವುದಕ್ಕಾಗುವುದಿಲ್ಲ, ಬೇರೆ ಕಡೆಗೆ ಹೋಗಬೇಕು ಎಂದು ಹೇಳಿದರು. ಹೀಗೆ ಹೇಳಿದಂಥ ಬ್ಲಾಕ್ ಡೆವಲಪಮೆಂಟ್ ಆಫೀಸರ್ ಅವರಿಗೆ ಉಪಯೋಗಿಸಲು ಜೀಪ್ ಮುಂತಾ ದುವನ್ನು ಕೊಟ್ಟಿದ್ದೀರಾ ಎನ್ನುವ ಪ್ರಶ್ನೆಯನ್ನು ಹಾಕಬೇಕಾಗಿದೆ. ಇದು ಅಲ್ಲಿಯ ಮುನಿಸಿಪಲ್ ಕೌನ್ಸಿಲ್ಲಿಗೆ ಮಾಡಿದ ಅವಮರ್ಯಾದೆಯಲ್ಲ, ರಾಷ್ಟ್ರಕ್ಕೆ ಮಾಡಿದ ಅವಮರ್ಯಾದೆ. ಡಿ. ಎಂ. ಕೆ. ಪಕ್ಷದ ವರು ಕರೀ ಬಾವುಟದ ಪ್ರದರ್ಶನ ಮಾಡಿದರು, ಅವರಿಂದ ಗಲಭೆಯಾಯಿತು ಎಂದು ಅವರನ್ನು ದಸ್ತಗಿರಿ ಮಾಡಿ ಇಟ್ಟಿದ್ದಾರೆ. ಇಂಥದ್ದರಲ್ಲಿ ಗಣರಾಜ್ಯ ಉತ್ಸವದ ವಿಷಯದಲ್ಲಿ ಇಂಥ ಅಪರಾಧ ವನ್ನು ಮಾಡಿರುವ ಬಿ. ಡಿ. ಓ. ಅವರನ್ನು ಜೈಲಿಗೆ ಕಳಿಸಬೇಕಾಗಿತ್ತು ಎಂದು ನಾನು ಅಭಿಪ್ರಾಯ ಪಡುತ್ತೇನೆ. ಗಣರಾಜ್ಯ ಉತ್ಸವ ಎಲ್ಲರಿಗೂ ಸೇರಿದ ಉತ್ಸವ. ಅದು ಒಂದು ರಜಾದಿನ. ರಜಾ ದಿನದಂದು ಜೀಪನ್ನು ಒಂದು ಒಳ್ಳೆಯ ಕೆಲಸಕ್ಕೆ ಕೊಡದೆ ಇರುವುದನ್ನು ಸರ್ಕಾರದವರು ಯೋಚನೆ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಡೆಲ್ಲಿಯಲ್ಲಿ ಮೈಸೂರು ರಾಜ್ಯದ ಏಜಂಟರನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಅಲ್ಲಿ ಏಜಂ ಟರು ಇರುವುದರಿಂದ ಏನು ಕೆಲಸ ಸಾಧ್ಯವಾಗುತ್ತದೆ ಎನ್ನುವ ವಿಚಾರವನ್ನು ನೋಡಬೇಕು. ಇದಕ್ಕೆ ಹಣ ಬೇಕೆಂದು ಹೆಚ್ಚುವರಿ ಬೇಡಿಕೆಯ ಮೂಲಕ ಕೇಳಿದ್ದಾರೆ. 25 ಜನ ಮಂತ್ರಿಗಳೂ ಸರ್ವೇಸಾಧಾರಣವಾಗಿ ತಿಂಗಳಿಗೆ 30 ದಿವಸದಲ್ಲಿ 15-20 ದಿವಸ ಡೆಲ್ಲಿಯಲ್ಲಿರುತ್ತಾರೆ. ನಮ್ಮ ವಿದ್ಯಾ ಮಂತ್ರಿಗಳು 5ನೆಯ ತಾರೀಖು ಡೆಲ್ಲಿಯಲ್ಲಿರುತ್ತಾರೆ. ಒಬ್ಬ ಮಂತ್ರಿಗಳು ಡೆಲ್ಲಿಯಿಂದ ವಾಪಸು ಬಂದರೆ ಇನ್ನೊಬ್ಬ ಮಂತ್ರಿಗಳ ಡೆಲ್ಲಿ ಕಾರ್ಯಕ್ರಮ ಸಿದ್ಧವಾಗುತ್ತದೆ. ಇದರ ಮೇಲೆ ಅಲ್ಲಿ ಒಬ್ಬ ಏಜಂಟ್ ಏಕೆಬೇಕು, ಅವರು ಮಾಡತಕ್ಕ ಕೆಲಸವಾದರೂ ಏನು ಇದೆ ಎನ್ನುವುದನ್ನು ಸರ್ಕಾರ ಹೇಳಬೇಕಾಗಿದೆ. ಡೆಲ್ಲಿಯಲ್ಲಿ ನಮ್ಮ ಕೆಲಸ ಕಾರ್ಯಗಳು ಸುಗಮವಾಗಿ ಆಗುವುದಕ್ಕೆ ಈ ಏಜಂಟ ರನ್ನು ನೇಮಕ ಮಾಡಿರುವುದರಿಂದ ಏನಾದರೂ ಸಾಧ್ಯವಾಗಿದೆಯೇ, ಅವರ ನೇಮಕದಿಂದ ಪ್ರಯೋಜನವಾಗಿದೆಯೇ ಎನ್ನುವುದನ್ನು ಕೂಡ ಆಲೋಚನೆ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

54ನೆಯ ಡಿಮ್ಯಾಂಡಿನಲ್ಲಿ ಕೋಳಿ ಅಭಿವೃದ್ಧಿ ಯೋಜನೆಗೆ ಹಣವನ್ನು ಕೇಳಿದ್ದಾರೆ. ಇದು ಮಾನ್ಯ ರೆವೆನ್ಯೂ ಮಂತ್ರಿಯವರಾದ ಕೃಷ್ಣಪ್ಪನವರಿಗೆ ಬಹಳ ಪ್ರಿಯವಾದ ಯೋಜನೆ. ಕೋಳಿ ಅಭಿವೃದ್ಧಿ ಯೋಜನೆ, ದನಗಳ ಅಭಿವೃದ್ಧಿ, ಕುರಿಗಳ ಪೋಷಣೆ ಇದೆಲ್ಲ ಅವರಿಗೆ ಬಹಳ ಪ್ರಿಯವಾದುವು. ನಾನು ಯಾವತ್ತು ವಿಮಾನ ನಿಲ್ದಾಣಕ್ಕೆ ಹೋದರೂ ಕೋಳಿ ಅಭಿವೃದ್ಧಿ ಯೋಜನೆಗೆ ಸಂಬಂಧ

ಪಟ್ಟ ಒಂದು ವ್ಯಾನ್ ಅಲ್ಲ ಕಾಣುತ್ತದೆ. ಈ ಯೋಜನೆಯ ಸಂಬಂಧದಲ್ಲಿ ಯಾರಾದರೂ ಡೆಲ್ಲಿಗೆ ಹೋಗುತ್ತಿರುತ್ತಾರೆ ಅಥವಾ ಡೆಲ್ಲಿಯಿಂದ ಯಾರಾದರೂ ಇಲ್ಲಿಗೆ ಬರುತ್ತಿರುತ್ತಾರೆ.

1,08,500ರೂಪಾಯಿಗಳನ್ನು ಸ್ಯಾಂಪಲ್ ಸರ್ವೆಗಾಗಿ ಕೊಟ್ಟಿದ್ದಾರೆ. 22ನೆ ಡಿಮ್ಯಾಂಡಿನಲ್ಲಿ ಐಟಂ. 3 ರಲ್ಲಿ ಪೌಲ್ಟ್ರಿ ಎಕ್ಸ್‌ಟೆನ್‌ಷನ್ ಸೆಂಟರ್ಸ್ ಎಂದು ಹಣವನ್ನು ಕೇಳಿದ್ದಾರೆ. ಇನ್ನೊಂದು ಕಡೆ ಮಂಗಳೂರು ಮಳವಳ್ಳಿ, ಹಾವೇರಿ, ಗಂಗಾವತಿ, ಬೆಳಗಾಂ ಇಲ್ಲೆಲ್ಲ ಮೊಟ್ಟೆ ಅಭಿವೃದ್ಧಿ ಯೋಜನೆ ಮಾಡಬೇಕೆಂದು 10 ಲಕ್ಷ ರೂಪಾಯಿ, ಮತ್ತೊಂದು ಕಡೆ ಕೋಲಾರ, ತುಮಕೂರು, ಬೆಂಗಳೂರು ಇಲ್ಲಿ Scheme for setting up plants for manufacture and distribution of balanced poultry feed ಗಾಗಿ 2.20 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. Sample surveys on estimation of annual production of milk and eggs and collection of reliable statistics on various bovine and poultry practices in the State at a cost not exceeding Rs. 1,08,500. ಹೀಗೆ ಕೋಳಿ ಅಭಿವೃದ್ಧಿ ಯೋಜನೆಗಾಗಿ ಸರ್ಕಾರ ಸಮೃದ್ಧಿಯಾಗಿ ಹಣವನ್ನು ಖರ್ಚು ಮಾಡುತ್ತಿದೆ. ಕೋಳಿ ಅಭಿವೃದ್ಧಿ ಯೋಜನೆ ಬೇಡ ಎಂದು ಹೇಳತಕ್ಕ ಸ್ಥಿತಿಯಲ್ಲಿ ನಾವು ಇಲ್ಲ. ಕೋಳಿ ಅಭಿವೃದ್ಧಿ ಯೋಜನೆಯನ್ನು ಮಾಡುವುದರ ಜೊತೆಗೆ ಜನಗಳ ಅಭಿವೃದ್ಧಿ ಮಾಡತಕ್ಕ ಯೋಜನೆಗಳನ್ನೂ ಕೂಡ ಹಾಕಿಕೊಳ್ಳಬೇಕು. ಕೋಳಿ ಅಭಿವೃದ್ಧಿ ಯೋಜನೆಗಳಿಗೆ, ಸ್ಯಾಂಪಲ್ ಸರ್ವೆ ಕಾರ್ಯಕ್ಕಾಗಿ 1,85,000 ರೂಪಾಯಿಗಳನ್ನು ಖರ್ಚುಮಾಡಕ್ಕದ್ದು ಸರಿಯಿಲ್ಲ.

ಶ್ರೀಮಾನ್ ಮುಕ್ಕಣ್ಣಪ್ಪನವರು ವ್ಯವಸಾಯದ ಇಲಾಖೆಯ ವಿಷಯವಾಗಿ ಮಾತನಾಡಿದರು. ವ್ಯವಸಾಯ ಇಲಾಖೆಯ ಮಂತ್ರಿಗಳಿಗೆ ಒಬ್ಬ ಪಾರ್ಲಿಮೆಂಟರಿ ಕಾರ್ಯದರ್ಶಿಯನ್ನು ಲಗತ್ತಿಸಿದ್ದಾರೆಂದು ಹೇಳಿದರು. ನಾವು ಹೇಳುವ ವಿಷಯಗಳನ್ನು ವ್ಯವಸಾಯ ಶಾಖೆಯ ಮಂತ್ರಿಗಳು ಗಮನಿಸುತ್ತಾರೆಯೋ ಇಲ್ಲವೋ ಎನ್ನುವ ಸಂಶಯ ನಮಗೆ ಬಂದಿದೆ. ಮದ್ದೂರು ತಾಲ್ಲೂಕು ಸೋಮನಹಳ್ಳಿಯಲ್ಲಿ 25 ವರ್ಷಗಳ ಕೆಳಗೆ ಒಂದು ಅಗ್ರಿಕಲ್ಚರಲ್ ಫಾರಂ ಅನ್ನು ಸ್ಥಾಪನೆ ಮಾಡಿದ್ದಾರೆ. ಅಲ್ಲಿಯ ಜನ ನೂರಾರು ಎಕರೆ ಜಮೀನನ್ನು ಫಾರಂಗೋಸ್ಕರ ಬಿಟ್ಟಿದ್ದಾರೆ. ಸಾಯಿಲ್ ಕನ್‌ಸರ್‌ವೇಷನ್ ಸೆಂಟರನ್ನು ಕೂಡ ಸ್ಥಾಪನೆ ಮಾಡಿದ್ದಾರೆ. ಅಲ್ಲಿ ಏನು ಬೆಳೆಯುತ್ತಿದ್ದಾರೆ ಎನ್ನುವುದನ್ನು ನಾನು ಮೂರು ಸಾರಿ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ನಾಲ್ಕು ಸಾರಿ ವ್ಯವಸಾಯ ಇಲಾಖಾ ಡೈರೆಕ್ಟರವರ ಗಮನಕ್ಕೆ ತಂದಿದ್ದೇನೆ. ಸೋಮನಹಳ್ಳಿಯ ಫಾರಂ ಒಳಗೆ ಹೋಗಿ ಅಲ್ಲಿ ಯಾವ ರೀತಿಯ ವ್ಯವಸಾಯವನ್ನು ಮಾಡುತ್ತಿದ್ದಾರೆ ಎಂದು ನೋಡಿದರೆ ಬಹುಶಃ ಅವರು ವ್ಯವಸಾಯವನ್ನೇ ಬಿಡುತ್ತಿದ್ದಾರೆಂದು ಕಾಣುತ್ತದೆ. ಮಂತ್ರಿಗಳ ಗಮನಕ್ಕೆ ನಾವು ಯಾವುದಾದರೂ ಒಂದು ವಿಚಾರವನ್ನು ತಂದಾಗ ಅವರು ಸುಮ್ಮನೆ ತಲೆ ಅಲ್ಲಾಡಿಸಿದರೆ ಅದನ್ನು ಸರ್ಕಾರದವರು ಮಾಡಿದ ಹಾಗೆ ಆಗುವುದಿಲ್ಲ. ಇದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಾವು ಏನೇ ಹೇಳಿದರೂ ಸಹ ವ್ಯವಸಾಯ ಮಂತ್ರಿಗಳು ಇಲ್ಲ ಎನ್ನುವುದಿಲ್ಲ. ಏನು ಪ್ರಯೋಜನ ? ಅವರು ಸುಮ್ಮನೆ ತಲೆಯನ್ನು ಅಲ್ಲಾಡಿಸುತ್ತಿದ್ದಾರೆ. ನಾವು ಹೇಳಿದ್ದಕ್ಕೆ ಏನಾದರೂ ಕ್ರಮ ತೆಗೆದುಕೊಂಡರೆ ಚೆನ್ನಾಗಿರುತ್ತದೆ. ಯಾರ ಮೇಲೂ ನಾವು ಏಕಾಏಕಿ ಆರೋಪಣೆ ಮಾಡುವುದಿಲ್ಲ. ಸರ್ಕಾರದವರು ತಮ್ಮ ಜವಾಬ್ದಾರಿ ಏನೆಂಬುದನ್ನು ಚೆನ್ನಾಗಿ ಅರಿತುಕೊಂಡು ಇಡೀ ಜನತೆಗೆ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟರೆ ಆಗ ಆ ಸರ್ಕಾರ ಒಂದು ಮಾದರಿ ಸರ್ಕಾರವಾಗುತ್ತದೆಂದು ಹೇಳುವ ವಿಚಾರವೇನಿದೆ ಅದು ಒಂದು ಯೋಗ್ಯವಾದ ವಿಚಾರವೆಂಬುದಾಗಿ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಒಟ್ಟಿನಲ್ಲಿ ಹೇಳಬೇಕಾದರೆ, ಈ ಸಭೆಯಲ್ಲಿ ಈಗ ಅರ್ಥಮಂತ್ರಿಗಳು 20 ಕೋಟಿ ರೂಪಾಯಿಗಳ ಬೇಡಿಕೆಯನ್ನು ಮಂಡಿಸಬಾರದಾಗಿತ್ತು. ಇದು ಮೊದಲಿನಿಂದಲೂ ಅವ್ಯವಹಾರಿಕವಾದುದಾಗಿದೆ. ಹಣಕಾಸಿನ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉತ್ತಮವಾಗಲಿಲ್ಲ. ಉತ್ತಮವಾಗುವುದಕ್ಕೆ ಇವರು ಏನು ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವೇನು ಸಾಧನೆಗಳನ್ನು ಸಾಧಿಸಬೇಕೆಂಬ ಜವಾಬ್ದಾರಿಯನ್ನು ನಮ್ಮ ಮೇಲೆ ಹಾಕಿಕೊಂಡಿದ್ದೇವೋ ಅಷ್ಟನ್ನು ಸಾಧಿಸಲು ಸಾಕಷ್ಟು ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಈ ಸರ್ಕಾರಕ್ಕೆ ಶಕ್ತಿ ಇಲ್ಲದೆ ಹೋಯಿತು. ಇವತ್ತು ಈ ಮೈಸೂರು ಸರ್ಕಾರದಲ್ಲಿ ಬಕಪಕ್ಷಿಯಂತೆ ಪ್ರತಿಯೊದಕ್ಕೂ ದೆಹಲಿ ಕಡೆಗೆ ಕೈ ಚಾಚುವುದು ಮತ್ತು ಅವರ ಸಹಕಾರವನ್ನೇ ಕಾದು ನೋಡುವ ಪರಿಸ್ಥಿತಿ ಬಂದಿದೆ. ಇವರು ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚುಮಾಡುವುದಕ್ಕೆ ಪೂರ್ಣ ಗಮನ ಕೊಡದಿದ್ದರೆ ರಾಜ್ಯಕ್ಕೆ ಸಂಪೂರ್ಣವಾಗಿ ಕೇಂದ್ರದಿಂದ ಸಹಾಯ, ಸಹಕಾರ ದೊರೆಯಲಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now adjourn to meet at 11-20 A.M.

The House adjourned at Fifty-two Minutes past Ten of the Clock and re-assembled at Thirty Minutes past Eleven of the Clock.

[MR. SPEAKER in the Chair]

† Sri S. S. KOLKE BAIL (Coondapur) While supporting the supplementary budget, I want to give some suggestions with regard to the food policy. Here I find in Demand No. 15, *i.e.*, to create some new services for the Food Department, about 7 lakhs of rupees have been asked for and some hundreds of persons have to be appointed. Now, in every Budget or in every session, a number of Bills have been passed on account of Speaker's quickness. We have passed the highest number of Bills.

Mr. SPEAKER.—Compliments go to the members not to the Speaker. I have not passed any Bill.

Sri S. S. KOLKE BAIL.—In every Act, we find that there are number of posts created or new services created. In every Department we find that a number of Officers are to be appointed. After appointment of these Officers, we have to find money to pay them. If this sort of thing continues, the State will come to some kind of trouble at some stage. So instead of having half starved 10 clerks, it is better to have two clerks with full stomach to work for the enforcement of the various other measures which we are enacting here. I request the Government that our services must be proned and our N.G.O.s whoever it may be, should be paid better, so that they will do better work than other Officers to be appointed. With full stomach two clerks will certainly turn out about 10 half-starved clerks' works. N.G.O.s should be paid more instead of increasing the number. In this particular case, I find under the new Food Department, what is called new Services, they are going to have 2 to 3 hundred more Officers. By appointing these Officers, can we improve our food situation? On the contrary, the reversal will be the effect. If more officers are appointed, there will be more corruption. Now, a number of Head Constables will be posted at the check-posts. In these check-posts, we cannot expect these persons to be honest. Recently, another order has been passed by Government saying, there is check in the State itself. There is inter-State movement check. Anti-social beings will raise their heads. There will be smuggling of food grains. In the course of smuggling, they are sure to corrupt our officers. Our ill-paid officers are sure to become victims. In view of this fact, it is better that we do not appoint more officers and incur more expenditure. Better we confine to present staff. This creation of more posts will create Frankenstine.

We have to take special care to see that no more appointments are made. In the Secretariat I found on the other day not a single clerk was there not a single Officer was there. They had gone to obtain their rations. When the Secretary concerned wanted to know where they had gone, I was told they had gone to obtain their rations, because they could not get rations on the previous day. Work suffered for 2 to 3 hours in the Secretariat. Unless we evolve some method with regard to the food policy in the matter of procurement and in the matter of movement, and in the matter of distribution this will go beyond the control of the Government and unnecessarily create heart burning among the people in the towns and urban areas. These restrictions within the State from District to District will cause further troubles and create corruption among Officers and give room to other anti-social activities. These will also land our people in trouble and give room to various offences. Government should evolve a policy where there will be free movement of food in the State. Now, the Government suggested that procurement is necessary and they are in short of 3 to 4 lakhs of tons of foodstuffs within the State. There is already lean supply in the Market. Action is taken to procure some more food. *i.e.*, 4 to 5 lakhs of tons of food. That means, we are short of 8 to 10 lakhs of tons of foodstuffs. Under these circumstances, it is not advisable either to enter the free market or to put any ban on the movement of food. Of course it is stated by our Hon'ble Food Minister that we are sandwitched between Kerala on one side and Maharastra on the other. If we take care of these, what we grow in the Mysore State, is sufficient. I think the procurement policy is creating a lot of heart-burning both among the ryots and also consumers.

